# ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

80/81, 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

**ದೂರವಾಣಿ: 2331 7299 ಮೊಬೈಲ್: 9141103221**

**SRINIDHI**

**ನೋಂದಣಿ: ಆರ್‌ಎಸ್‌ಆರ್/ಸೌ.ಕಾ. 86/ನೋ.ಸಂ.029.2001-02 ದಿನಾಂಕ 16-10-2001**

## ಇಪ್ಪತ್ನಾಲ್ಕನೆಯ ವಾರ್ಷಿಕ ಸರ್ವ ಸದಸ್ಯರ ಸಭೆ

## 2024-2025

**ದಿನಾಂಕ 17-08-2025ನೇ ಭಾನುವಾರ ಬೆಳಿಗ್ಗೆ 11:30 ಗಂಟೆಗೆ**

**ಸ್ಥಳ: ಶ್ರೀರಾಮಮಂದಿರ ಸಭಾ ಭವನ**
**ಈಸ್ಟ್ ಪಾರ್ಕ್ ರಸ್ತೆ, 9 ಮತ್ತು 10 ನೇ ಕ್ರಾಸ್ ನಡುವೆ,**
**ಮಲ್ಲೇಶ್ವರಂ, ಬೆಂಗಳೂರು – 560 003**

# ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

## ನಿರ್ದೇಶಕ ಮಂಡಳಿಯ ಸದಸ್ಯರು

(2020–21 ರಿಂದ 2025–26)

**ಸರ್ವಶ್ರೀ/ಶ್ರೀಮತಿ**

| | | |
|---|---|---|
| 1. | ಕಸ್ತೂರಿರಂಗನ್ ಹೆಚ್.ಆರ್. | ಅಧ್ಯಕ್ಷರು |
| 2. | ಬಾಲಕೃಷ್ಣ ಬಿ.ಎನ್. | ಉಪಾಧ್ಯಕ್ಷರು |
| 3. | ಕಸ್ತೂರಿರಂಗಾಚಾರ್ ಹೆಚ್.ಎಸ್. | ನಿರ್ದೇಶಕರು |
| 4. | ಕೋದಂಡರಾಮ್.ಎಂ.ಜಿ. | ನಿರ್ದೇಶಕರು |
| 5. | ನಾರಾಯಣ್ ಕೆ.ಕೆ | ನಿರ್ದೇಶಕರು |
| 6. | ರವಿಕಿರಣ್ ಹೆಚ್.ಎಸ್ | ನಿರ್ದೇಶಕರು |
| 7. | ರಾಜೀವಲೋಚನಂ ಹೆಚ್.ವಿ. | ನಿರ್ದೇಶಕರು |
| 8. | ವಿಜಯರಾಘವನ್ ಹೆಚ್.ವಿ. | ನಿರ್ದೇಶಕರು |
| 9. | ಶ್ರೀಕಾಂತ್ ಎಸ್. | ನಿರ್ದೇಶಕರು |
| 10. | ಶ್ರೀನಿವಾಸ್ ಎಮ್.ಎಸ್. | ನಿರ್ದೇಶಕರು |
| 11. | ಶ್ರೀನಿವಾಸರಂಗಾಚಾರ್ಎಂ.ಎನ್. | ನಿರ್ದೇಶಕರು |
| 12. | ನಮ್ರತಾ. ಕೆ. | ನಿರ್ದೇಶಕರು |
| 13. | ಶುಭಶ್ರೀ ಡಿ. ಪಿ. | ನಿರ್ದೇಶಕರು |

**ಸಹಕಾರಿ ಕಛೇರಿಯ ಕೆಲಸದ ವೇಳೆ**

| | |
|---|---|
| ಮಂಗಳವಾರದಿಂದ ಶನಿವಾರದವರೆಗೆ | ಬೆಳಿಗ್ಗೆ 9–30 ರಿಂದ ಮಧ್ಯಾಹ್ನ 1–00ರ ವರೆಗೆ,<br>ಸಂಜೆ 4–00 ರಿಂದ ಸಂಜೆ 7–00ರ ವರೆಗೆ |
| ಭಾನುವಾರ ಬೆಳಿಗ್ಗೆ | ಬೆಳಿಗ್ಗೆ 9–30 ರಿಂದ ಮಧ್ಯಾಹ್ನ 1–00ರ ವರೆಗೆ |
| **ಸೋಮವಾರ** | **ವಾರದ ರಜಾದಿನ** |

# ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

80/81, 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560 003 **ದೂರವಾಣಿ: 23317299**

## ಇಪ್ಪತ್ನಾಲ್ಕನೆಯ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಇದರ ಇಪ್ಪತ್ನಾಲ್ಕನೆಯ ವಾರ್ಷಿಕ ಸರ್ವಸದಸ್ಯರ ಸಭೆಯು **ದಿನಾಂಕ 17–08–2025ನೇ ಭಾನುವಾರ ಬೆಳಿಗ್ಗೆ 11–30 ಗಂಟೆಗೆ** ಮಲ್ಲೇಶ್ವರಂ ಈಸ್ಟ್ ಪಾರ್ಕ್ ರಸ್ತೆ, 9 ಮತ್ತು 10ನೇ ಕ್ರಾಸ್ ಮಧ್ಯದಲ್ಲಿರುವ **ಶ್ರೀರಾಮ ಮಂದಿರದಲ್ಲಿ** ಕೆಳಕಂಡ ವಿಷಯಗಳನ್ನು ಪರಿಶೀಲಿಸಲು ಸೇರಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಲಾಪಗಳಲ್ಲಿ ಭಾಗವಸಲು ಕೋರಲಾಗಿದೆ.

ಕೋರಂ ಇರದಿದ್ದಲ್ಲಿ ಸಭೆಯನ್ನು ಅದೇ ದಿವಸ ಸಾಯಂಕಾಲ 4–00 ಗಂಟೆಗೆ ಮತ್ತೆ ನಡೆಸಲಾಗುವುದು.

**ವಿಷಯಗಳು**

1. ಸ್ವಾಗತ ಭಾಷಣ
2. ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು
3. ಇಪ್ಪತ್ಮೂರನೆಯ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡಾವಳಿಗಳ ಮಂಡನೆ
4. 2024–25ನೇ ಸಾಲಿನ ಆಡಳಿತ ಮಂಡಳಿಯ ವರದಿಯ ಮೇಲಿನ ಚರ್ಚೆ ಮತ್ತು ಅಂಗೀಕಾರ
5. 2024–25ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಮತ್ತು ವರದಿಯ ಅಂಗೀಕಾರ
6. 2024–25ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ
7. 2025–26 ಮತ್ತು 2026–27ನೇ ಸಾಲಿನ ಅಂದಾಜು ವೆಚ್ಚದ ಅಂಗೀಕಾರ
8. 2025–26ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ.
9. ಇತರ ವಿಷಯಗಳು – ಅಧ್ಯಕ್ಷರ ಅಪ್ಪಣೆಯ ಮೇರೆಗೆ
10. ವಂದನಾರ್ಪಣೆ

ಆಡಳಿತ ಮಂಡಳಿಯ ಅಪ್ಪಣೆಯಮೇರೆಗೆ

ಬೆಂಗಳೂರು
ತಾ॥ 01–08–2025

ಸಹಿ/–
ಮುಖ್ಯ ನಿರ್ವಹಣಾಧಿಕಾರಿ

## ಟಿಪ್ಪಣಿಗಳು

1. ಸದಸ್ಯರು ಅಜೆಂಡಾದಲ್ಲಿಯ ವಿಷಯಗಳಾದ ಲೆಕ್ಕಪತ್ರ ಆಡಿಟ್ ವರದಿ ಇತರ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಯಬಯಸಿದಲ್ಲಿ ಇದಕ್ಕಾಗಿಯೇ ಕಲ್ಪಿಸಿದ ಸಭೆಯ ವೆಬ್‌ಸೈಟ್ **srinidhisabha.in** ಇದರಲ್ಲಿ ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ AGM ವಿಭಾಗದಲ್ಲಿ ನೋಡಬಹುದು ಅಥವಾ ಡೌನ್‌ಲೋಡ್ ಮಾಡಿಕೊಳ್ಳಬಹುದು.

2. ಸದಸ್ಯರಲ್ಲಿ ಈ ಸೌಲಭ್ಯ ಇರದಿದ್ದಲ್ಲಿ ವಾರ್ಷಿಕ ವರದಿಯನ್ನು ಕಚೇರಿಯಲ್ಲಿ ಪಡೆಯಬಹುದು. ಸದಸ್ಯರು ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿದ್ದಲ್ಲಿ ಪತ್ರದ ಮುಖಾಂತರ ಅಥವಾ **srinidhi.souharda@gmail.com** ಇಮೇಲ್ ಐಡಿಗೆ 11-08-2025ಕ್ಕೆ ಮುಂಚಿತವಾಗಿ ಕಳುಹಿಸಬಹುದು.

### ವಿಶೇಷ ಸೂಚನೆ

1. ಸೌಹಾರ್ದ ಕಾಯ್ದೆಯ ಪ್ರಕಾರ ಸಹಕಾರಿಯಲ್ಲಿ ಕನಿಷ್ಠ ವ್ಯವಹರಿಸದಿದ್ದಲ್ಲಿ ಮತ್ತು ಸಹಕಾರಿಯ ಐದು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಎರಡು ವರ್ಷ ಹಾಜರಾಗದಿದ್ದರೆ, ಅಂಥ ವ್ಯಕ್ತಿಯು ಮತದಾನದ ಹಕ್ಕಿಗೆ ಅನರ್ಹನಾಗುತ್ತಾರೆ.
2. **ಸರ್ವಸದಸ್ಯರ ಸಭೆಯ ಸೂಚನಾ ಪತ್ರ ಮತ್ತು ಈ ಮಾಹಿತಿಯನ್ನು ತಮ್ಮ ಪರಿಚಯದ ಇತರ ಸದಸ್ಯರಿಗೆ ತಿಳಿಸಲು ಕೋರಲಾಗಿದೆ.**
3. ಸದಸ್ಯರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ ಸಹಕಾರಿಯ ಕಛೇರಿಯಲ್ಲಿ ತಿಳಿಸಬೇಕಾಗಿ ಕೋರಿದೆ.
4. ಪಾವತಿಯಾದ ಷೇರು ಬಂಡವಾಳದ ಮೇಲಿನ **2021-22ನೇ** ಸಾಲಿನ ಲಾಭಾಂಶವನ್ನು (ಡಿವಿಡೆಂಡ್) ಸಹಕಾರಿಯಿಂದ ಇನ್ನೂ **ಪಡೆಯದೆ** ಇರುವ ಸದಸ್ಯರು ತಾ॥ **17-11-2025 ಕ್ಕೆ** ಮುಂಚಿತವಾಗಿ ಪಡೆಯಬೇಕಾಗಿ ಕೋರಲಾಗಿದೆ. ಹಾಗೆ ಪಡೆಯದೆ ಇದ್ದರೆ ಅಂತಹ ಮೊಬಲಗನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸಂಘದ ಉಪನಿಯಮಗಳ ಅನ್ವಯ **ಶಾಸನಬದ್ಧ ಕಾಯ್ದಿಟ್ಟ ನಿಧಿಗೆ** ವರ್ಗಾಯಿಸಲಾಗುವುದು.
5. **ಪ್ರತಿಭಾ ಪುರಸ್ಕಾರ:** ಸದಸ್ಯರಿಗೆ/ಸದಸ್ಯರ ಮಕ್ಕಳಿಗೆ ಈ ವರ್ಷದ **SSLC, PUC II** ಗಳಲ್ಲಿ **ಕನಿಷ್ಠ 90% ಅಂಕಗಳು ಪಡೆದ ಎಲ್ಲರಿಗೂ, Degree, Masters Degree** (2024-25) ಮುಂತಾದ ಪರೀಕ್ಷೆಗಳಲ್ಲಿ ನವೆಂಬರ್ **2024** ರ ನಂತರ ಘೋಷಿಸಿದ ಫಲಿತಾಂಶದಂತೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದವರಲ್ಲಿ **ಅತಿ ಹೆಚ್ಚು ಅಂಕಗಳಿಸಿದ ಇಬ್ಬರಿಗೆ ಹಾಗೂ MD, M.Tech** ನ ಎಲ್ಲರಿಗೂ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಅರ್ಹ ಅಭ್ಯರ್ಥಿಗಳು **11-08-2025ಕ್ಕೆ** ಮುಂಚೆ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದು.
6. **ಸಭೆಯ ಕಲಾಪದ ನಂತರ ಸದಸ್ಯರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ.**

## ಇಪ್ಪತ್ನಾಲ್ಕನೆಯ ವಾರ್ಷಿಕ ಸರ್ವ ಸದಸ್ಯರ ಸಭೆ 17–08–2025ಟಿಪ್ಪಣಿಗಳು

**ವಿಷಯ 1 :** ಸ್ವಾಗತ ಭಾಷಣ

**ಟಿಪ್ಪಣಿ :** ಸಹಕಾರಿಯ ಅಧ್ಯಕ್ಷರು ಕಳೆದ ಆರ್ಥಿಕ ವರ್ಷದಲ್ಲಿಯ ಪ್ರಮುಖ ವಿಷಯಗಳ ಬಗ್ಗೆ ವಿವರಿಸುವರು.

**ವಿಷಯ 2 :** ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು

**ಟಿಪ್ಪಣಿ :** 17–08–2025 ರ ವಾರ್ಷಿಕ ಸರ್ವಸದಸ್ಯರ ಸಭೆಯ ನೋಟೀಸನ್ನು ದಾಖಲು ಮಾಡಬಹುದಾಗಿದೆ.

**ವಿಷಯ 3 :** ಇಪ್ಪತ್ಮೂರನೆಯ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡಾವಳಿಗಳ ಮಂಡನೆ.

**ಟಿಪ್ಪಣಿ :** ತಾ. 01–09–2024 ರಂದು ನಡೆದ ಇಪ್ಪತ್ಮೂರನೆಯ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡಾವಳಿಗಳನ್ನು ಕಚೇರಿಯಲ್ಲಿ ಪ್ರಕಟಿಸಿಲಾಗಿದ್ದು ಇದಕ್ಕೆ ಸದಸ್ಯರ ಆಕ್ಷೇಪಣೆಗಳು ಇಲ್ಲದಿರುವುದರಿಂದ ಇದನ್ನು ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗಿದ್ದು ಇದನ್ನು ಧೃಡೀಕರಿಸಬಹುದಾಗಿದೆ.

**ವಿಷಯ 4 :** 2024–25ನೇ ಸಾಲಿನ ಆಡಳಿತ ಮಂಡಳಿಯ ವರದಿಯ ಮೇಲಿನ ಚರ್ಚೆ ಮತ್ತು ಅಂಗೀಕಾರ

**ಟಿಪ್ಪಣಿ :** ಮಂಡಲಿಯು 2024–25ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ತಯಾರಿಸಿ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗಿದ್ದು ಸದಸ್ಯರು ಈ ವರದಿಯ ಮೇಲೆ ಚರ್ಚಿಸಿ ನಂತರ ಅನುಮೋದಿಸಬಹುದಾಗಿದೆ.

**ವಿಷಯ 5 :** 2024–25ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಮತ್ತು ವರದಿಯ ಅಂಗೀಕಾರ

**ಟಿಪ್ಪಣಿ :** ಮೆ. ಬೇಲೂರು ಮತ್ತು ಕಂ. ಇವರ ಲೆಕ್ಕಪರಿಶೋಧನಾ ವರದಿಯನ್ನು ಮುದ್ರಿಸಲಾಗಿದ್ದು ಅದರಲ್ಲಿಯ ನ್ಯೂನತೆಗಳನ್ನು ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಅದಕ್ಕೆ ಸೂಕ್ತ ಸಮಜಾಯಿಸಿ ನೀಡಲಾಗಿದೆ. ಇವೆಲ್ಲವುಗಳನ್ನು ಪರಿಶೀಲಿಸಿ ಅನುಮೋದನೆ ನೀಡಬಹುದಾಗಿದೆ.

**ವಿಷಯ6 :** 2024–25ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ.

**ಟಿಪ್ಪಣಿ :** 2024–25ರ ಲಾಭದ ವಿಲೇವಾರಿಯನ್ನು ಉಪವಿಧಿಯಂತೆ ಮಂಡಲಿಯು ಶಿಫಾರ್ಸು ಮಾಡಿದ್ದು ಇದನ್ನು ಅನುಮೋದನೆ ನೀಡಬಹುದಾಗಿದೆ.

**ವಿಷಯ 7:** 2025–26 ಮತ್ತು 2026–27ನೇ ಸಾಲಿನ ಅಂದಾಜು ವೆಚ್ಚದ ಅಂಗೀಕಾರ

**ಟಿಪ್ಪಣಿ :** 2024–25ನೇ ಸಾಲಿನಲ್ಲಿ ಅಂದಾಜು ವೆಚ್ಚಕ್ಕಿಂತ ಖರ್ಚು ಕೆಲವೊಂದು ಶೀರ್ಷಿಕೆಗಳಡಿಯಲ್ಲಿ ಹೆಚ್ಚಳವಾಗಿದ್ದು ಅವುಗಳ ವಿವರಗಳನ್ನು ಪರಿಶೀಲಿಸಿ ಅನುಮೋದನೆ ನೀಡಬಹುದಾಗಿದೆ. ಉಪವಿಧಿಯಲ್ಲಿ ಉಲ್ಲೇಖಿಸಿದಂತೆ ಮುಂದಿನ ವರ್ಷಗಳ ಬಜೆಟ್ಟನ್ನು ಮಂಡಲಿ ಶಿಫಾರ್ಸು ಮಾಡಿದ್ದು ಇದಕ್ಕೆ ಅನುಮೋದಿಸಬಹುದಾಗಿದೆ.

**ವಿಷಯ 8 :** 2025–26ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ.

**ಟಿಪ್ಪಣಿ** : ಮೆ. ಮಧುಕರ ಹೆಗ್ಡೆ ಮತ್ತು ಕಂ., ಬೆಂಗಳೂರು 560010 ಇವರನ್ನು 2025–26ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಲು ಆಡಳಿತ ಮಂಡಳಿಯು ಶಿಫಾರ್ಸು ಮಾಡಿದ್ದು, ಇವರನ್ನು ನೇಮಕ ಮಾಡಬಹುದಾಗಿದೆ.

ವಿಷಯ 9 : ಇತರ ವಿಷಯಗಳು – ಅಧ್ಯಕ್ಷರ ಅಪ್ಪಣೆಯ ಮೇರೆಗೆ.

**ಟಿಪ್ಪಣಿ** : ಸರ್ವ ಸದಸ್ಯರ ಸಭೆಯಲ್ಲಿ ಚರ್ಚೆಗಾಗಿ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು **11–08–2025**ಕ್ಕೆ ಮುಂಚಿತವಾಗಿ ಸಹಕಾರಿಯ ಕಛೇರಿಯಲ್ಲಿ ಕೋರಿಕೆ ಸಲ್ಲಿಸಿದಲ್ಲಿ ಅವುಗಳ ಬಗ್ಗೆ ಸರ್ವ ಸದಸ್ಯರ ಸಭೆಯಲ್ಲಿ ಪ್ರತ್ಯೇಕವಾದ ಟಿಪ್ಪಣಿ ನೀಡಲಾಗುವುದು.

**ವಿಷಯ 10 :** ವಂದನಾರ್ಪಣೆ

## ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

80/81, 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560 003

ದೂರವಾಣಿ: 23317299

### ಇಪ್ಪತ್ತಮೂರನೆಯ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡಾವಳಿಗಳು

ದಿನಾಂಕ 01–09–2024 ರಂದು ಭಾನುವಾರ ಬೆಳಿಗ್ಗೆ 11:30 ಗಂಟೆಗೆ ಮಲ್ಲೇಶ್ವರಂ ಈಸ್ಟ್ ಪಾರ್ಕ್ ರಸ್ತೆಯಲ್ಲಿರುವ ಶ್ರೀರಾಮ ಮಂದಿರ ಇದರ ಸಭಾಂಗಣದಲ್ಲಿ ನಡೆದ ಇಪ್ಪತ್ತಮೂರನೆಯ ಸರ್ವಸದಸ್ಯರ ಸಭೆ.

ಸಭೆಯಲ್ಲಿ ಹಾಜರಾದ ಸದಸ್ಯರ ಸಂಖ್ಯೆ: 225

ಸಭೆಯು ಕು. ಎಂ ಆರ್ ಪ್ರಕೃತಿ. ಅವರ ಪ್ರಾರ್ಥನೆಯಂದಿಗೆ ಬೆಳಿಗ್ಗೆ 11.30 ಗಂಟೆಗೆ ಪ್ರಾರಂಭವಾಯಿತು. ಸಭೆಯ ಅಧ್ಯಕ್ಷರಾದ ಶ್ರೀ ಹೆಚ್.ಆರ್.ಕಸ್ತೂರಿರಂಗನ್ ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಮಂಡಳಿಯ ಸದಸ್ಯರಾದ ಶ್ರೀ ಎಮ್.ಎನ್. ಶ್ರೀನಿವಾಸರಂಗಾಚಾರ್ ವಾರ್ಷಿಕ ವರದಿಯಲ್ಲಿ ಕೆಲವು ಮುದ್ರಣ ತಪ್ಪುಗಳನ್ನು ವಿವರಿಸಿ ಸರಿಪಡಿಸಿಕೊಳ್ಳಲು ಸೂಚಿಸಿದರು. ಸಭೆಯ ಕಲಾಪಗಳು ಪ್ರಾರಂಭವಾಗುವುದಕ್ಕೆ ಮೊದಲು ಹಲವು ವರ್ಷಗಳಿಂದ ಉಪಾಧ್ಯಕ್ಷರಾದ ದಿ. ಬಿ.ವಿ. ವರದರಾಜಯ್ಯಂಗಾರ್ ಮತ್ತು ಹಿರಿಯ ಸದಸ್ಯರಾದ ಕೆ.ವಿ ಸಂಪತ್ತಯ್ಯಂಗಾರ್ ಅವರು ನಿಧನರಾಗಿದ್ದನ್ನು ಪ್ರಸ್ತಾಪಿಸಿ ಅವರ ಸೇವೆಯನ್ನು ಸ್ಮರಿಸಿ ಅವರ ಮತ್ತು ಕಳೆದ ಸಾಲಿನಲ್ಲಿ ಮೃತರಾದ ಸದಸ್ಯರ ಆತ್ಮಗಳಿಗೆ ಸದ್ಗತಿಯನ್ನು ಕೋರಿ ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಲಾಯಿತು.

**ವಿಷಯಗಳು**

**1. ಸ್ವಾಗತ ಭಾಷಣ:**

ಅಧ್ಯಕ್ಷರಾದ ಶ್ರೀ ಹೆಚ್.ಆರ್.ಕಸ್ತೂರಿರಂಗನ್ ಸದಸ್ಯರನ್ನು ಸಹಕಾರಿಯ ವಾರ್ಷಿಕ ಸಭೆಗೆ ಸ್ವಾಗತಿಸಿದರು. ಸಂಕ್ಷಿಪ್ತವಾಗಿ ಸಂಸ್ಥೆಯ ಬೆಳವಣಿಗೆಯನ್ನು ವಿವರಿಸಿದರಲ್ಲದೇ ಸಹಕಾರಿಯ ಕಾರ್ಯಕ್ಷೇತ್ರವನ್ನು ಒಟ್ಟು 11 ಜಿಲ್ಲೆಗಳಿಗೆ ವಿಸ್ತರಿಸಲಾಗಿದ್ದನ್ನು ವಿವರಿಸಿ ಆಯಾ ಜಿಲ್ಲೆಗಳಿಂದ ಹೆಚ್ಚು ಸದಸ್ಯರಾಗಿ ಸಹಕಾರಿಯ ಸೌಲಭ್ಯಗಳನ್ನು ಉಪಯೋಗಿಸಬಹುದೆಂದರು. ಹೆಚ್ಚಿನ ಪ್ರಗತಿಗೆ ಸದಸ್ಯರು ಸಹಕಾರಿಯಲ್ಲಿ ಹೆಚ್ಚು ಆಸಕ್ತಿ ವಹಿಸಬೇಕೆಂದು ಹೇಳಿದರು. ದಕ್ಷ ಆಡಳಿತದಿಂದ ಸಹಕಾರಿಯು ತೃಪ್ತಿಕರವಾದ ಲಾಭಾಂಶ ನೀಡುತ್ತಿದೆ. ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಲಾಭಾಂಶ ನೀಡಬಹುದೆಂದರು. ಈ ವರ್ಷ ಸರ್ವ ಸದಸ್ಯರ ಸಭೆಯ ನೋಟೀಸನ್ನು ಸರಿಯಾಗಿ ಕಳಿಸಿದರೂ ಕೆಲವರಿಗೆ ಟಪಾಲು ತಲುಪಿಲ್ಲ ಎಂದು ಕೇಳಿಬಂದದ್ದರಿಂದ ಪೋಸ್ಟಲ್ ಅಧಿಕಾರಿಗಳಿಗೆ ದೂರುನೀಡಲಾಗಿದೆ ಎಂದು ವಿವರಿಸಿ ಸದಸ್ಯರು ನೀಡಿದ ಮೊಬೈಲ್ ನಂಬರಿಗೆ ಸಂದೇಶ ನೀಡಲಾಗಿದೆ ಎಂದು ಹೇಳಿದರು.

**2. ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟನೆ:**

ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟನೆಯನ್ನು ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಡಿ.ಪಿ. ಶುಭಶ್ರೀ ಓದಿದರು. ಇದನ್ನು ಸಭೆಯ ಅನುಮತಿಯೊಂದಿಗೆ ದಾಖಲು ಮಾಡಲಾಯಿತು.

**3. ಇಪ್ಪತ್ತೆರಡನೆಯ ವರ್ಷದ ಸರ್ವಸದಸ್ಯರ ಸಭೆಯ ನಡಾವಳಿಗಳ ಮಂಡನೆ:**

2022–2023 ನೇ ವರ್ಷದ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಉಪಾಧ್ಯಕ್ಷರಾದ ಶ್ರೀ ಬಿ.ಎನ್ ಬಾಲಕೃಷ್ಣ ಅವರು ಓದಿದರು. ಇದನ್ನು ಒಪ್ಪಬಹುದೆಂದು ಶ್ರೀ ಎಮ್. ಎನ್. ಕೃಷ್ಣಮೂರ್ತಿ ಸೂಚಿಸಿದರು ಮತ್ತು ಶ್ರೀ ಕೆ.ಎಸ್. ನರಸಿಂಹನ್ ಬೆಂಬಲಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**4. 2023–2024 ನೇ ಸಾಲಿನ ಆಡಳಿತ ಮಂಡಳಿಯ ವರದಿ:**

2023–2024 ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಹೆಚ್.ವಿ.ವಿಜಯರಾಘವನ್ ಮಂಡಿಸಿದರು. ನಂತರ ಅಧ್ಯಕ್ಷರಾದ ಶ್ರೀ ಹೆಚ್.ಆರ್.ಕಸ್ತೂರಿರಂಗನ್ ಸದಸ್ಯರು ಈ ವಿಷಯದ ಮೇಲೆ ಯಾವುದೇ ಪ್ರಶ್ನೆ ಇದ್ದಲ್ಲಿ ಕೇಳಬಹುದೆಂದರು. ಆದರೆ ಯಾವ ಸದಸ್ಯರೂ ಚರ್ಚಿಸಲು ಬಾರದೇ ಇದ್ದದರಿಂದ ಒಪ್ಪಿಗೆ ನೀಡಬಹುದೆಂದರು. ಶ್ರೀ ಹೆಚ್.ಎನ್ ಶ್ರೀನಿವಾಸಮೂರ್ತಿ ವರದಿಯನ್ನು ಒಪ್ಪಬಹುದೆಂದು ಸೂಚಿಸಿದರು ಮತ್ತು ಶ್ರೀ ಜನಾರ್ದನ್ ಅನುಮೋದಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**5. 2023–2024 ನೇ ಸಾಲಿನ ಪರಿಶೊಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಮತ್ತು ವರದಿಯ ಅಂಗೀಕಾರ:**

ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಸ್. ಶ್ರೀಕಾಂತ್ 2023–2024 ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮತ್ತು ವರದಿಯನ್ನು ಮಂಡಿಸಿದರು. ಆಡಿಟ್ ವರದಿಯ ಬಗ್ಗೆ ವಿವರಣೆ ನೀಡುವ ಮೊದಲು ಸಹಕಾರಿಯ ಬೆಳವಣಿಯ ಬಗ್ಗೆ ವಿವರಣೆ ನೀಡಿದರಲ್ಲದೆ ಮಂಡಳಿಯು ಶ್ರದ್ದೆಯಿಂದ ಕಾರ್ಯ ನಿರ್ವಹಿಸುತ್ತಿದ್ದು ಮುಂದಿನ ವರ್ಷಗಳಲ್ಲಿ ಯುವ ಜನರು ಹೆಚ್ಚಾಗಿ ಸದಸ್ಯರಾಗಬೇಕು ಎಂದು ಹೇಳಿ ಆಡಿಟ್ ವರದಿಯಲ್ಲಿಯ ಮುಖ್ಯವಾದ ಅಂಕಿ–ಅಂಶಗಳನ್ನು ವಿವರಿಸಿದರು. ನ್ಯೂನತೆಗಳಿಗೆ ಕೊಟ್ಟಿರುವ ಸಮಜಾಯಿಷಿಗಳ ವಿವರ ನೀಡಿದರು. ಅಧ್ಯಕ್ಷರು ಆಡಿಟ್ ವರದಿಯ ಮೇಲೆ ಚರ್ಚಿಸಬಹುದೆಂದರು. ಸದಸ್ಯರು ಈ ಬಗ್ಗೆ ಚರ್ಚೆಗೆ ಮುಂದಾಗಲಿಲ್ಲ. ಆಡಿಟ್ ವರದಿಯನ್ನು ಒಪ್ಪಬಹುದೆಂದು ಶ್ರೀ ಕೆ. ಜೆ. ಶ್ರೀನಿವಾಸನ್ ಸೂಚಿಸಿದರು ಮತ್ತು ಶ್ರೀ ಹೆಚ್. ಕೆ. ರಾಜೀವ್ ಅನುಮೋದಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**6. 2023–2024 ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ:**

ನಿರ್ದೇಶಕ ಮಂಡಳಿಯು 2023–2024 ನೇ ಸಾಲಿನ ನಿವ್ವಳ ಲಾಭ ರೂ.23,55,171.47 ವಿಲೇವಾರಿಯನ್ನು ಉಪವಿಧಿ 73 ರಲ್ಲಿ ತಿಳಿಸಿರುವಂತೆ ಶಿಫಾರ್ಸು ಮಾಡಿದೆ ಎಂದು ಮಂಡಳಿಯ ಸದಸ್ಯರಾದ ಶ್ರೀ ಕೆ.ಕೆ ನಾರಾಯಣ್ ವಿವರಿಸಿದರಲ್ಲದೇ ನಿವ್ವಳ ಲಾಭದ ವಿಂಗಡನೆಗೆ ಸಭೆಯ ಒಪ್ಪಿಗೆಯನ್ನು ಕೋರಿದರು. ಇದನ್ನು ಒಪ್ಪಬಹುದೆಂದು ಶ್ರೀ ಎಮ್. ಎನ್. ರಾಮಪ್ರಿಯ ಸೂಚಿಸಿದರು ಮತ್ತು ಶ್ರೀ ಎಸ್.ಎಮ್. ಅನಂತಕೃಷ್ಣ ಬೆಂಬಲಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**7. 2024–25 ಮತ್ತು 2025–2026 ನೇ ಸಾಲುಗಳ ಅಂದಾಜು ವೆಚ್ಚಗಳ ಅಂಗೀಕಾರ:**

ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ನಮ್ರತಾ ಕೆ 2023–2024 ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚುಗಳ ಬಗ್ಗೆ ವಿವರಿಸಿ ಕೆಲ ವಾಸ್ತವಿಕ ಖರ್ಚುಗಳು ಅಂದಾಜುಗಳಿಗಿಂತ ಹೆಚ್ಚಾಗಿದ್ದು ಅವುಗಳನ್ನು ಅನುಮೋದಿಸಲು ಕೋರಿದರು ಮತ್ತು 2024–2025 ರ (Revised) ಮತ್ತು 2025–2026 ನೇ ಸಾಲುಗಳ ಅಂದಾಜು ವೆಚ್ಚದ ಪಟ್ಟಿಯನ್ನು ಮಂಡಿಸಿ ಅನುಮೋದನೆಯನ್ನು ಕೋರಿದರು. ನಂತರ ಇದನ್ನು ಒಪ್ಪಬಹುದೆಂದು ಶ್ರೀ ಹೆಚ್ ಕೆ. ರಾಜೀವ್ ಸೂಚಿಸಿದರು ಮತ್ತು ಶ್ರೀ ಎಸ್. ಪಿ. ಅಯ್ಯಂಗಾರ್ ಬೆಂಬಲಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**8. 2024–2025 ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ:**

ಆರ್ಥಿಕ ವರ್ಷ 2024–2025 ನೇ ಸಾಲಿಗೆ ಮೆ. ಬೇಲೂರು ಮತ್ತು ಕಂ, ಗಿರಿನಗರ ಬೆಂಗಳೂರು ಅವರನ್ನು ಸನ್ನದು ಲೆಕ್ಕ ಪರಿಶೋಧಕರನ್ನಾಗಿ ನೇಮಿಸಲು ಆಡಳಿತ ಮಂಡಳಿಯ ಪರವಾಗಿ ಶ್ರೀ ಎಮ್. ಎಸ್. ಶ್ರೀನಿವಾಸ್ ಅನುಮೋದನೆಯನ್ನು ಕೋರಿದರು. ಇದನ್ನು ಒಪ್ಪಬಹುದೆಂದು ಶ್ರೀ ಯು. ಎಸ್. ರಾಮಚಂದ್ರ ಸೂಚಿಸಿದರು. ಶ್ರೀ ಎಸ್.ಎಮ್. ಅನಂತಕೃಷ್ಣ ಅನುಮೋದಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**9. ಇತರ ವಿಷಯಗಳು:**

ತದನಂತರ ನಿರ್ದೇಶಕ ಮಂಡಳಿಯ ಸದಸ್ಯರಾದ ಶ್ರೀ ಎಮ್.ಎನ್. ಶ್ರೀನಿವಾಸರಂಗಾಚಾರ್ ಅವರು ಹಿಂದಿನ ವರ್ಷಗಳ ಲಾಭಾಂಶ ಪಡೆಯದೇ ಇರುವ ಸದಸ್ಯರು ಕಚೇರಿಯಲ್ಲಿ ತ್ವರಿತವಾಗಿ ತಮ್ಮ ಲಾಭಾಂಶವನ್ನು ಪಡೆಯಬೇಕು. ಸಹಕಾರಿಯ ಉಪವಿಧಿಯಂತೆ ಸದಸ್ಯರು ಕಡ್ಡಾಯವಾಗಿ ಕನಿಷ್ಠ ವ್ಯವಹಾರ ಮಾಡಬೇಕೆಂದು ತಿಳಿಸಿದರು.

ಸಭೆಯ ಕೊನೆಯಲ್ಲಿ ಸಹಕಾರಿಯ ಅರ್ಹ ಸದಸ್ಯರ/ಸದಸ್ಯರ ಅರ್ಹ ಮಕ್ಕಳಿಗೆ ಪ್ರೋತ್ಸಾಹಕ ಬಹುಮಾನವನ್ನು ಶುಶ್ರುತಾ ಎಜ್ಯುಕೇಶನ್ ಟ್ರಸ್ಟ್ ಬೆಂಗಳೂರು ಇದರ ಸ್ಥಾಪಕ ಟ್ರಸ್ಟಿ ಆದ ಡಾ. ಅಚಲಾ ನರಗುಂದ ವಿತರಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರಗಳನ್ನು ವಿತರಿಸಲಾದ ಒಟ್ಟು ಸಂಖ್ಯೆ:

| | |
|---|---|
| ಎಸ್.ಎಸ್.ಎಲ್.ಸಿ | 2 |
| ಪಿಯುಸಿ | 5 |
| ಬಿಕಾಂ | 1 |
| ಎಂ.ಎ. | 1 |
| ಎಂ.ಟೆಕ್ | 1 |
| ಒಟ್ಟು | 10 |

ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಹೆಚ್.ಎಸ್.ಕಸ್ತೂರಿರಂಗಾಚಾರ್ ಅವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/–

**(ಶ್ರೀ ಹೆಚ್.ಆರ್. ಕಸ್ತೂರಿರಂಗನ್)**

ಅಧ್ಯಕ್ಷರು

# ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

80/81, 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

## ಇಪ್ಪತ್ನಾಲ್ಕನೆಯ ವಾರ್ಷಿಕ ವರದಿ

**ಮಾನ್ಯ ಸದಸ್ಯರೇ,**

ನಮ್ಮ ಸಹಕಾರಿಯ ಇಪ್ಪತ್ನಾಲ್ಕನೆಯ ಸರ್ವಸದಸ್ಯರ ಸಭೆಗೆ ತಮ್ಮನ್ನು ಆದರ ಪೂರ್ವಕವಾಗಿ ಸ್ವಾಗತಿಸುತ್ತೇವೆ. 2024–25ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪತ್ರಗಳು ಹಾಗೂ ಆಡಿಟ್ ವರದಿಯನ್ನು ತಮ್ಮ ಮುಂದೆ ಮಂಡಿಸುವುದಕ್ಕೆ ಸಂತೋಷಪಡುತ್ತೇವೆ.

ಸಹಕಾರಿಯ ಕಳೆದ ವರ್ಷದ ನಿವ್ವಳ ಲಾಭವು ರೂ. 23.55 ಲಕ್ಷವಾಗಿದ್ದು 2024–25ಕ್ಕೆ ಇದು ರೂ.25.19 ಲಕ್ಷ ಆಗಿರುತ್ತದೆ. ಸಹಕಾರಿಯ ಕಳೆದ ಎರಡು ವರ್ಷಗಳ ಆರ್ಥಿಕ ಪರಿಸ್ಥಿತಿಯನ್ನು ಕೆಳಗೆ ಕಾಣಿಸಿದ ಅಂಕಿ ಅಂಶಗಳಿಂದ ತಿಳಿಯಬಹುದು.

| ವಿವರ | 2024 | 2025 |
|---|---|---|
| ಸದಸ್ಯರು | 1404 | 1417 |
| ಷೇರು ಬಂಡವಾಳ | 60.75 | 61.78 |
| ಮೀಸಲು ಮತ್ತು ಇತರ ನಿಧಿಗಳು | 439.09 | 465.44 |
| ಠೇವಣಿಗಳು | 1584.26 | 1783.38 |
| ಹೂಡಿಕೆಗಳು | 524.38 | 629.71 |
| ಸಾಲಗಳು | 1669.66 | 1704.86 |
| ದುಡಿಯುವ ಬಂಡವಾಳ | 2300.45 | 2429.98 |
| ಲಾಭ | 23.55 | 25.19 |

(ಸದಸ್ಯರು ಹೊರತುಪಡಿಸಿ ಎಲ್ಲಾ ಅಂಕಿಗಳು ಲಕ್ಷ ರೂ. ಗಳಲ್ಲಿ)

**1. ಸದಸ್ಯತ್ವ:**

ಸಹಕಾರಿಯ ಸದಸ್ಯರ ಸಂಖ್ಯೆ ಕಳೆದ ಸಾಲಿನ ಕೊನೆಯಲ್ಲಿ 1404 ಇತ್ತು. ಪ್ರಸಕ್ತ ಸಾಲಿನಲ್ಲಿ 28 ಜನ ಹೊಸ ಸದಸ್ಯರಾಗಿದ್ದು 15 ಸದಸ್ಯರ ನಿರ್ಗಮಿಸಿದ್ದು ವರ್ಷದ ಕೊನೆಯಲ್ಲಿ ಇದು 1417 ಇರುತ್ತದೆ. ಒಬ್ಬ ಸಹಸದಸ್ಯರನ್ನು ಸೇರಿಸಿಕೊಳ್ಳಲಾಗಿದೆ. ಜನವರಿ 2023 ರಿಂದ ಸಹಕಾರಿಯ ಕಾರ್ಯವ್ಯಾಪ್ತಿಯನ್ನು ಬೆಂಗಳೂರು ನಗರ, **ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ** ವಿಸ್ತರಿಸಲಾಗಿದೆ. ಸದಸ್ಯರು ಹೆಚ್ಚು ಯುವಜನರನ್ನು ಸಕ್ರಿಯ ಸದಸ್ಯರನ್ನಾಗಿ ನೊಂದಾಯಿಸಲು ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಕೆಲ ವರ್ಷಗಳಿಂದ ಸದಸ್ಯರಿಗೆ ಉಪವಿಧಿಯಂತೆ ಸಕ್ರಿಯವಾಗಿರಬೇಕೆಂದು ತಿಳಿಸಲಾಗುತ್ತಿದೆ. ಆದರೂ ಕೆಲವು ಸದಸ್ಯರು ತಮ್ಮ ಷೇರುಗಳ ಹೊರತಾಗಿ ಬೇರೆ ಯಾವುದೇ ವ್ಯವಹಾರ ಮಾಡುತ್ತಿಲ್ಲ. **ಹೊಸ ಕಾಯ್ದೆ ಅಡಿಯಲ್ಲಿ ಸದಸ್ಯನು ಸಹಕಾರಿಯ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ ಕಡ್ಡಾಯವಾಗಿ ತೊಡಗಿಸಿರಬೇಕು ಅಥವಾ**

**ಅವಧಿಯಲ್ಲಿ ಕನಿಷ್ಠ ಸಾಲ ಪಡೆದುಕೊಂಡು ಕನಿಷ್ಠ ಮೂರು ತಿಂಗಳಿಗಿಂತ ಹೆಚ್ಚು ಬಾಕಿ ಉಳಿಯದಂತೆ ಸಾಲದ ಕಂತು ಪಾವತಿಸಿರಬೇಕು. ಅಲ್ಲದೇ ಸದಸ್ಯನು ಸಹಕಾರಿಯ 5 ವರ್ಷಗಳ ಅವಧಿಯಲ್ಲಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲೇ ಬೇಕು.** ಈ ನಿಯಮಗಳನ್ನು ಪಾಲಿಸದ ಸದಸ್ಯರು ಚುನಾವಣೆಗಳಲ್ಲಿ ಮತ ಚಲಾಯಿಸಲು ಅನರ್ಹರು ಮತ್ತು ಕಾಯ್ದೆಯ ಪ್ರಕರಣ 20 ರನ್ವಯ ಕ್ರಮಕ್ಕೆ ಅರ್ಹರಾಗಿರುತ್ತಾರೆ.

ಫೆಬ್ರುವರಿ 2026 ರಲ್ಲಿ ಸಹಕಾರಿ ಸಂಘದ ನಿರ್ದೇಶಕ ಮಂಡಳಿಯ ಚುನಾವಣೆಯು ವರ್ಷ 2025–26 ರಿಂದ 2030–31 ಐದು ವರ್ಷಗಳ ಅವಧಿಗೆ ನಡೆಯಲಿದೆ. ಈ ಚುನಾವಣೆಯಲ್ಲಿ ಭಾಗವಹಿಸಲು ಸಂಘದಿಂದ ಗುರುತಿನ ಚೀಟಿಯನ್ನು ಪಡೆದಿರಬೇಕು.

ಇನ್ನೂ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು ತಮ್ಮ ಆಧಾರ್ ಮತ್ತು ಪ್ಯಾನ್ ಕಾರ್ಡ್‌ನ ಪ್ರತಿಯನ್ನು ಸಹಕಾರಿಗೆ ನೀಡಿ ಗುರುತಿನ ಚೀಟಿಯನ್ನು ಪಡೆಯಬೇಕೆಂದು ಕೋರಲಾಗಿದೆ.

**2. ಷೇರು ಬಂಡವಾಳ:**

ಅಧಿಕೃತ ಬಂಡವಾಳ ರೂ.75,00,000 ದಲ್ಲಿ ಪಾವತಿಯಾದ ಷೇರು ಬಂಡವಾಳವು ಕಳೆದ ಸಾಲಿನ ಕೊನೆಯಲ್ಲಿದ್ದ ರೂ. 60.75 ಲಕ್ಷದಿಂದ ಪ್ರಸಕ್ತ ಸಾಲಿನ ಕೊನೆಯಲ್ಲಿರೂ. 61.78 ಲಕ್ಷಕ್ಕೆ ಏರಿದೆ.

**3. ಕಾಯ್ದಿಟ್ಟ ನಿಧಿ ಮತ್ತು ಇತರ ನಿಧಿಗಳು:**

ಕಾಯ್ದಿಟ್ಟ ನಿಧಿ ಮತ್ತು ಇತರ ನಿಧಿಗಳ ಬೆಳವಣಿಗೆಯ ಬಗ್ಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಸೌಹಾರ್ದ ಕಾಯ್ದೆಯಂತೆ ಶಿಕ್ಷಣ ನಿಧಿಗೆ ಶೇಕಡ 2 ರಷ್ಟನ್ನು ಪಾವತಿಸಲಾಗಿದೆ. ಅಲ್ಲದೇ 0.5% ಸಹಕಾರ ಅಕಾಡೆಮಿಗೆ ವರ್ಗಾಯಿಸಲಾಗಿದೆ. ವರ್ಷದ ಕೊನೆಯಲ್ಲಿ ಎಲ್ಲ ನಿಧಿಗಳು ಸೇರಿ ರೂ. 465.44 ಲಕ್ಷವಾಗಿದೆ. ಇದರಲ್ಲಿ ಕಾಯ್ದಿಟ್ಟ ನಿಧಿ ರೂ. 154.54 ಲಕ್ಷ ಸೇರಿದೆ. ಕಾಯ್ದಿಟ್ಟ ನಿಧಿಯನ್ನು ಕಲಂ 18ರಂತೆ ಬ್ಯಾಂಕುಗಳ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದೆ.

**4. ಠೇವಣಿಗಳು:**

ಈ ವರ್ಷಾರಂಭದಲ್ಲಿ ಒಟ್ಟು ರೂ. 1684.26 ಲಕ್ಷವಾಗಿದ್ದ ಠೇವಣಿ ಸಂಗ್ರಹವು ವರ್ಷಾಂತ್ಯದಲ್ಲಿ ರೂ. 1783.38 ಲಕ್ಷವಾಗಿದೆ. ಠೇವಣಿಗಳನ್ನು ಸಾಲಬೇಡಿಕೆಗನುಗುಣವಾಗಿ ಪಡೆಯಲಾಗುತ್ತಿದೆ. ಸದಸ್ಯರು ನಮ್ಮ ಸಂಸ್ಥೆಯ ಮೇಲಿಟ್ಟ ಅಪಾರ ವಿಶ್ವಾಸ ಮತ್ತು ಬೆಂಬಲವು ನಮಗೆ ಸಂತೋಷವನ್ನುಂಟುಮಾಡಿದೆ. ವರ್ಷದ ಕೊನೆಯಲ್ಲಿ ಠೇವಣಿಗಳ ಮೇಲೆ ರೂ. 129.70 ಲಕ್ಷ ರೂಪಾಯಿ ಬಡ್ಡಿಯನ್ನು ಪಾವತಿಸಲಾಗಿದೆ.

**5. ಹೂಡಿಕೆಗಳು:**

ವರ್ಷಾರಂಭದಲ್ಲಿ ಸಹಕಾರಿಯ ಉಳಿಕೆ ಹೂಡಿಕೆ ನಿಧಿಗಳು ರೂ. 524.38 ಲಕ್ಷವಿದ್ದು ವರ್ಷಾಂತ್ಯದಲ್ಲಿ ಇದು ಮೊತ್ತ ರೂ. 629.71 ಲಕ್ಷವಾಗಿವೆ. ಈ ಹೂಡಿಕೆಯಲ್ಲಿ ರೂ.154.54 ಲಕ್ಷ ಮೀಸಲು ನಿಧಿ ಮತ್ತು ಸಿಬ್ಬಂದಿಗಳಿಗೆ ನೀಡಬೇಕಾದ ಗ್ರಾಚುಯಿಟಿ ಹಣ ರೂ.8.53 ಲಕ್ಷ ಸೇರಿದೆ.

ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ಬಸವನಗುಡಿ ಇದರಲ್ಲಿ ಹೂಡಲಾದ ಠೇವಣಿಗಳ ಬಗ್ಗೆ ಹಿಂದಿನ ವರ್ಷಗಳಲ್ಲಿ ವಿವರಣೆ ನೀಡಲಾಗಿತ್ತು. ಅದರಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ಅವರು ಒಟ್ಟಾರೆ ನೀಡಿದ ಬಡ್ಡಿಯನ್ನು 'ಸಂಚಿತ ಬಡ್ಡಿ' ಖಾತೆಯಲ್ಲಿ ವರ್ಗಾಯಿಸಿ ಒಟ್ಟು ರೂ.69.22 ಲಕ್ಷ ಪ್ರತ್ಯೇಕವಾಗಿ ತೋರಿಸಲಾಗಿದೆ. ಮತ್ತು ಸಹಕಾರಿಯ ಹಿತದೃಷ್ಟಿಯಿಂದ ಈ ವರ್ಷ ರೂ11.00 ಲಕ್ಷ ಹಣವನ್ನು 'ಎಕ್ಸಿಜೆನ್ಸಿ ಮ್ಯಾನೆಜಮೆಂಟ್' ಇದಕ್ಕೆ ವರ್ಗಾಯಿಸಲಾಗಿದ್ದು ಅದರ ಮೊತ್ತ ರೂ38.62 ಲಕ್ಷವಾಗಿರುತ್ತದೆ. ಇದು ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ಕೊರತೆಯನ್ನು ಭರಿಸಲು ಅನುಕೂಲವಾಗುವುದು. ಸದರಿ ಸಹಕಾರ ಬ್ಯಾಂಕಿನ ಪುನಃಶ್ಚೇತನಕ್ಕೆ ಪ್ರಯತ್ನಗಳು ಮುಂದುವರೆದಿದೆ ಎಂದು ತಿಳಿದುಬಂದಿದೆ.

## 6. ಸಾಲಗಳು:

ನಿಯಮಾವಳಿಗಳ ಪ್ರಕಾರ ಅರ್ಹ ಸದಸ್ಯರಿಗೆ ತಲಾ ರೂ. 100 ಲಕ್ಷ ಮೀರದಂತೆ ಸಾಲ ನೀಡಬಹುದಾಗಿದೆ. ಇದರಲ್ಲಿ ವಾಹನ ಸಾಲಕ್ಕೆ ರೂ.15.00 ಲಕ್ಷ ಗರಿಷ್ಠ ಮಿತಿ ಮತ್ತು ಜಾಮೀನು ಸಾಲವನ್ನು ರೂ. 3,00,000/–ಕ್ಕೆ ನಿಗದಿಪಡಿಸಲಾಗಿದೆ. ಆಡಳಿತ ಮಂಡಳಿಯು ಸಾಲದ ಅರ್ಜಿಗಳನ್ನು ಕೂಲಂಕುಶವಾಗಿ ಚರ್ಚಿಸಿ ಸಾಲಗಳನ್ನು ಮಂಜೂರು ಮಾಡುತ್ತಿದೆ. ಈಗ ಸ್ಥಿರಾಸ್ತಿ ಸಾಲದ ಮೇಲೆ ಶೇ.9.50 ರಂತೆ ಬಡ್ಡಿ ವಿಧಿಸಲಾಗುತ್ತಿದೆ.

ವರ್ಷಾರಂಭದಲ್ಲಿ ಒಟ್ಟು ಸಾಲಗಳು ರೂ. ರೂ.1669.66 ಲಕ್ಷವಿದ್ದು ವರ್ಷಾಂತ್ಯಕ್ಕೆ ಇದು ರೂ.1704.86 ಲಕ್ಷವಾಗಿದೆ. ವರ್ಷಾಂತ್ಯಕ್ಕೆ ಒಟ್ಟು ಸಾಲಗಳ ಮೊತ್ತ ಸುಮಾರು ರೂ.35.20 ಲಕ್ಷದಷ್ಟು ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ವರ್ಷದಲ್ಲಿ ಒಟ್ಟು ರೂ.486.95 ಲಕ್ಷ ಸಾಲ ನೀಡಲಾಗಿದೆ. ಒಟ್ಟು ಸಾಲಗಳಲ್ಲಿ ರೂ.1650.15 ಲಕ್ಷ ಪೂರ್ಣ ಆಧಾರಿತ ಸಾಲಗಳಿದ್ದು ಇದು ಒಟ್ಟು ಸಾಲದಲ್ಲಿ ಶೇ. 96.80 ರಷ್ಟು ಇರುತ್ತದೆ. ಜಾಮೀನು ಸಾಲವು ರೂ.54.71 ಲಕ್ಷವಿರುತ್ತವೆ. ಇದು ಒಟ್ಟು ಸಾಲದ ಶೇ.3.20

**ಸುಸ್ತಿ ಸಾಲಗಳು:**

ಕಳೆದ ವರ್ಷಾಂತ್ಯದಲ್ಲಿ ಮೂರು ತಿಂಗಳು ಮತ್ತು ಅದಕ್ಕೂ ಹೆಚ್ಚು ಕಂತುಗಳ ಸುಸ್ತಿ ಸಾಲಗಳ ಮೊತ್ತ 11 ಬಾಕೀದಾರರಿಂದ ಒಟ್ಟು ರೂ. 39.49 ಲಕ್ಷವಾಗಿದ್ದು ಈ ವರ್ಷಾಂತ್ಯದಲ್ಲಿ ಸುಸ್ತಿಸಾಲದ ಮೊತ್ತವು 10 ಬಾಕೀದಾರರಿಂದ ರೂ. 51.54 ಲಕ್ಷಕ್ಕೆ ಏರಿದೆ. ವಿವರಗಳು ಕೆಳಕಂಡಂತಿವೆ.

| ವಿವರ | 2024 | | 2025 | |
|---|---|---|---|---|
| | ಸಂಖ್ಯೆ | ಕಂತು ಬಾಕಿ* | ಸಂಖ್ಯೆ | ಕಂತು ಬಾಕಿ* |
| ಸ್ಥಿರಾಸ್ತಿ ಸಾಲಗಳು | 5 | 37.89 | 4 | 50.02 |
| ಜಾಮೀನು ಸಾಲಗಳು | 6 | 1.60 | 6 | 1.52 |
| **ಒಟ್ಟು** | **11** | **39.49** | **10** | 51.54 |

(*ಹಣ ಲಕ್ಷ ರೂಪಾಯಿಗಳಲ್ಲಿ)

**ಸುಸ್ತಿ ಸಾಲ ವಸೂಲಾತಿ ಕ್ರಮಗಳ ಬಗ್ಗೆ ವಿವರಣೆ:**

a) ಮೇಲೆ ಕಾಣಿಸಿದ 4 ಸ್ಥಿರಾಸ್ತಿ ಬಾಕಿದಾರರಲ್ಲಿ ಇಬ್ಬರು ಬಾಕೀದಾರರು ಹಣ ಪಾವತಿಸುತ್ತಿದ್ದಾರೆ. ಇಬ್ಬರು ಸರಿಯಾಗಿ ಮರುಪಾವತಿ ಮಾಡದಿರುವುದರಿಂದ ಬಾಕೀದಾರರಿಗೆ ದಾವಾ ನೋಟೀಸನ್ನು ನೀಡಲಾಗಿದ್ದು ಹಣ ಪಾವತಿಸದಿದ್ದಲ್ಲಿ ಅವರ ಮೇಲೆಯೂ ಕಾನೂನಿನ ಕ್ರಮ ತೆಗೆದುಕೊಳ್ಳಲಾಗುವುದು. ಜಾಮೀನು ಸಾಲ ಬಾಕೀದಾರರಲ್ಲಿ ಮೂವರು ಪಾವತಿಸುತ್ತಿದ್ದಾರೆ. ಉಳಿದವರ ಮೇಲೆ ನೋಟೀಸನ್ನು ನೀಡಲಾಗಿದೆ.

b) **ನಿಷ್ಕ್ರಿಯ ಆಸ್ತಿಗಳು (ಎನ್.ಪಿ.ಎ) :** ವರ್ಷಾಂತ್ಯಕ್ಕೆ ಕಾಯ್ದಿರಿಸಲಾದ ಎನ್.ಪಿ.ಎ (provision) ರೂ. 55.80 ಲಕ್ಷವಿದ್ದು, ಸುಸ್ತಿ ಸಾಲಗಳ ನಿಧಿ ರೂ.2.62 ಲಕ್ಷ ಸೇರಿ ಒಟ್ಟು ರೂ.58.42 ಲಕ್ಷವಾಗಿದೆ. ಆರ್ಥಿಕ ವರ್ಷದಲ್ಲಿ ಸುಸ್ತಿ ಸಾಲಗಳ ಕಂತುಗಳ ಒಟ್ಟು ಮೊತ್ತವು ರೂ.51.54 ಲಕ್ಷಗಳಿದ್ದರಿಂದ ನಿವ್ವಳ NPAಯು ಶೂನ್ಯ ಆಗಿದೆ.

7. **ಆಡಿಟ್ ವರ್ಗೀಕರಣ:**

ಸನ್ನದು ಲೆಕ್ಕಪರಿಶೋಧಕರಾದ ಮೆ. ಬೇಲೂರು ಮತ್ತು ಕಂ ಬೆಂಗಳೂರು ಇವರು ಲೆಕ್ಕಪತ್ರಗಳನ್ನು ಪರಿಶೋಧಿಸಿರುತ್ತಾರೆ. ಲೆಕ್ಕಪರಿಶೋಧಕರ ಇಲಾಖೆಯು 2017ರಿಂದ ಆಡಿಟ್ ವರ್ಗೀಕರಣ ಪ್ರಾರಂಭಿಸಿದ್ದು ತಮಗೆ ತಿಳಿದ ವಿಷಯ. ಪ್ರತಿವರ್ಷದಂತೆ ಈ ವರ್ಷವೂ ನಮ್ಮ ಸಹಕಾರಿಗೆ **'ಎ'** ವರ್ಗಿಕರಣ ಮಾಡಿರುತ್ತಾರೆ ಎಂದು ಹೇಳಲು ಸಂತೋಷಪಡುತ್ತೇವೆ.

8. **ತಂತ್ರಾಂಶ:** ಸದಸ್ಯರ ಅನುಕೂಲಕ್ಕಾಗಿ ಲೆಕ್ಕಪತ್ರಗಳನು ಗಣಕೀಕರಣ ಮಾಡಲು ನಿರ್ಧಸಲಾಗಿದ್ದು ಅದಕ್ಕಾಗಿ M/s Chipsapps ಬೆಂಗಳೂರು ಇವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು ವಹಿವಾಟವನ್ನು ಗಣಕೀಕರಣ ಮಾಡಲಾಗುತ್ತಿದೆ.

9. **ಕೃತಜ್ಞತೆ:**

ಸಹಕಾರಿಯು ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸದಸ್ಯರು ತೋರಿಸಿರುವ ಅಪಾರ ಬೆಂಬಲ ಮತ್ತು ಸಹಕಾರದಿಂದ ಸಾಧ್ಯವಾಗಿದೆ. ಇದಕ್ಕಾಗಿ ಆಡಳಿತ ಮಂಡಳಿಯು ಎಲ್ಲಾ ಸದಸ್ಯರಿಗೆ ಕೃತಜ್ಞತೆಯನ್ನು ಅರ್ಪಿಸುತ್ತದೆ. ಕಾಲಕಾಲಕ್ಕೆ ಉತ್ತಮ ಸಲಹೆ, ಸಹಕಾರವನ್ನು ನೀಡಿದ ಸಹಕಾರಿಗಳ ನಿಬಂಧಕರಿಗೆ ಮತ್ತು ಸಂಬಂಧಿತ ಅಧಿಕಾರಿಗಳಿಗೂ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ನಿಯಮಿತ ಮತ್ತು ಈ ಸಾಲಿನ ಲೆಕ್ಕ ತಪಾಸಣೆಯನ್ನು ಸಕಾಲದಲ್ಲಿ ಮಾಡಿಕೊಟ್ಟ ಮೆ. ಬೇಲೂರು ಅಂಡ್ ಕಂ. ಮತ್ತು ಆದಾಯ ಇತರ ತೆರಿಗೆಗಳ ಬಗ್ಗೆ ಸಲಹೆ ನೀಡುತ್ತಿರುವ ಮತ್ತು ಫೈಲಿಂಗ್ ಮಾಡುತ್ತಿರುವ ಮೆ. ಮಧುಕರ ಹೆಗ್ಡೆ ಮತ್ತು ಕಂ., ಬೆಂಗಳೂರು ಇವರಿಗೆ ನಮ್ಮ ಕೃತಜ್ಞತೆಗಳು. ನಮ್ಮ ಸಹಕಾರಿಯ ಬೆಳೆವಣಿಗೆಗೆ ಶ್ರಮಿಸಿದ ಸಿಬ್ಬಂದಿ ವರ್ಗದವರಿಗೂ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಆಡಳಿತ ಮಂಡಳಿಯ ಪರವಾಗಿ

ಬೆಂಗಳೂರು

01–08–2025

sd/-

**(ಹೆಚ್.ಆರ್. ಕಸ್ತೂರಿರಂಗನ್)**

ಅಧ್ಯಕ್ಷರು

# ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ

## ನಂ80/81, 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ ಬೆಂಗಳೂರು–560003

## 31–03–2025 ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತಃಖ್ತೆ

| ಹಿಂದಿನ ಸಾಲು | ಬಂಡವಾಳ ಹಾಗೂ ದಾಯಿತ್ವಗಳ ವಿವರ | ಪ್ರಸಕ್ತ ಸಾಲು | | ಹಿಂದಿನ ಸಾಲು | ಆಸ್ತಿಗಳ ಹಾಗೂ ಬರತಕ್ಕವುಗಳ ವಿವರ | ಪ್ರಸಕ್ತ ಸಾಲು | |
|---|---|---|---|---|---|---|---|
| | ಷೇರು ಬಂಡವಾಳ | | 61,77,900.00 | 1,85,292.00 | ಕೊನೆಯ ನಗದು ಶಿಲ್ಕು | 1,75,116.00 | 1,75,116.00 |
| 60,74,800.00 | ಸದಸ್ಯತ್ವ | 61,76,900.00 | | | | | |
| | ಸಹಸದಸ್ಯತ್ವ | 1,000.00 | | | **ಬ್ಯಾಂಕ್ ಶಿಲ್ಕು** | | 85,62,157.20 |
| | **ಮೀಸಲು ಮತ್ತು ಇತರೆ ನಿಧಿಗಳು** | | 4,65,44,149.18 | 34,840.00 | ಬಿ.ಡಿ.ಸಿ.ಸಿ ಬ್ಯಾಂಕ್ | 1,84,812.00 | |
| 97,82,169.00 | ಕಾರ್ಯಾಚರಣ ಮೀಸಲು ನಿಧಿ | 1,02,53,203.00 | | 15,55,361.99 | ಸಾರಸ್ವತ್ ಸಹಕಾರಿ ಬ್ಯಾಂಕ್ | 20,85,631.73 | |
| 24,42,685.33 | ಕೊರತೆ ನಿಭಾವಣಾ ನಿಧಿ | 24,42,685.33 | | 53,28,719.00 | ಎಸ್‌ಜಿಆರ್‌ಸ್‌ಬಿ ಉಳಿತಾಯ ಖಾತೆ | 53,28,719.00 | |
| 40,55,952.00 | ಕಟ್ಟಡ ನಿಧಿ | 42,09,038.00 | | 26,13,540.59 | ಕರೂರ್ ವೈಶ್ಯ ಬ್ಯಾಂಕ್ | 7,18,661.47 | |
| 3,56,814.00 | ಧರ್ಮಾರ್ಥ ನಿಧಿ | 3,68,590.00 | | 1,88,767.00 | ಕೆ.ಎಸ್.ಸಿ ಅಪೆಕ್ಸ್ ಬ್ಯಾಂಕ್ | | |
| | | | | | ಉಳಿತಾಯ ಖಾತೆ | 2,44,333.00 | |
| 26,14,019.00 | ಎಕ್ಷಿಜೆನ್ಸಿ ನಿರ್ವಹಣ ನಿಧಿ | 38,62,395.00 | | | | | |
| 5,34,713.00 | ಜುಬ್ಲೀ ನಿಧಿ | 5,53,554.00 | | | **ಗುಂತಾವಣಿಗಳು** | | 6,29,70,846.00 |
| 2,77,301.00 | ಮರಣೋತ್ತರ ಪರಿಹಾರ ನಿಧಿ | 2,59,404.00 | | | ಬಿಡಿಸಿಸಿ ಬ್ಯಾಂಕ್ ಠೇವಣಿ | 80,00,000.00 | |
| 9,18,130.00 | ಲಾಭಾಂಶ ಸಮತೋಲನಾ ನಿಧಿ | 9,47,570.00 | | 3,78,060.00 | ಬಿಡಿಸಿಸಿ ಬ್ಯಾಂಕ್ ಠೇವಣಿ(ಆರ್.ಎಫ್.ಡಿ) | 3,78,060.00 | |
| 55,50,000.00 | ನಿಷ್ಕ್ರೀಯ ಆಸ್ತಿಗೆ ಮಿಸಲು | 55,80,000.00 | | 1,28,193.00 | ಜನತಾ ಸಹಕಾರಿ ಬ್ಯಾಂಕ್ ಠೇವಣಿ | 1,60,749.00 | |
| 2,62,413.00 | ಹೋಕುಬಾಕಿ ಅವಕಾಶ | 2,62,413.00 | | 1,65,48,552.00 | ರಾಘವೇಂಧ್ರ ಸಹಕಾರಿ ಬ್ಯಾಂಕ್ | | |
| | | | | | ಸಂಚಿತ ಠೇವಣಿ | 1,65,48,552.00 | |
| 1,48,64,410.38 | ಮೀಸಲು ನಿಧಿ | 1,54,54,076.85 | | 50,14,822.00 | ಮಲ್ಲೇಶ್ವರಮ್ ಸಹಕಾರಿ ಬ್ಯಾಂಕ್ ಠೇವಣಿ | 15,14,822.00 | |
| 22,50,461.00 | ಸಾಮಾನ್ಯ ಕ್ಷೇಮ ನಿಧಿ | 23,51,220.00 | | 1,98,63,663.00 | ರಾಘವೇಂಧ್ರ ಸಹಕಾರಿ ಬ್ಯಾಂಕ್ | | |
| | | | | | ನಿಶ್ಚಿತ ಠೇವಣಿ | 1,98,63,663.00 | |
| | | | | 5,00,000.00 | ಶ್ರೀಚರಣ್ ಸೌಹಾರ್ದ ಸಹಕಾರಿ ಬ್ಯಾಂಕ್ | | |
| | | | | | ನಿಶ್ಚಿತ ಠೇವಣಿ | 5,00,000.00 | |
| | **ಠೇವಣಿಗಳು** | 17,83,37,506.00 | | 5,000.00 | ಸೌಹಾರ್ಧ ಒಕ್ಕೂಟ | 5,000.00 | |
| 8,46,11,643.00 | ನಿಶ್ಚಿತ ಠೇವಣಿ | 8,61,88,643.00 | | 1,00,00,000.00 | ಕೆ.ಎಸ್.ಸಿ ಅಪೆಕ್ಸ್ ಬ್ಯಾಂಕ್ ಠೇವಣಿ | 1,25,00,000.00 | |
| 18,69,417.00 | ಉಳಿತಾಯ ಠೇವಣಿ | 21,55,173.00 | | – | ಸಾರಸ್ವತ್ ಸಹಕಾರಿ ಬ್ಯಾಂಕ್ ಠೇವಣಿ | 35,00,000.00 | |
| 8,19,44,580.00 | ಸಂಚಿತ ಸ್ಥಿರ ಠೇವಣಿ | 8,99,93,690.00 | | | | | |

| | | | | | | | |
|---|---|---|---|---|---|---|---|
| | | | | | **ಸಾಲಗಳು ಮತ್ತು ಮುಂಗಡಗಳು** | | 17,04,86,405.00 |
| | **ಇತರೆ ಜವಾಬ್ದಾರಿಗಳು** | 94,19,887.40 | | 47,91,068.00 | ಠೇವಣಿ ಆಧಾರಿತಾ ಸಾಲಗಳು | 32,92,926.00 | |
| 7,294.00 | ಷೇರು ಅಮಾನತ್ತು | 7,294.00 | | 64,92,032.00 | ಜಾಮೀನು ಸಾಲ | 54,71,489.00 | |
| 10,500.00 | ಕಾನೂನು ಮತ್ತು | | | | | | |
| | ಮೌಲ್ಯಮಾಪನ ಶುಲ್ಕ | 5,000.00 | | 15,56,83,143.00 | ಸ್ಥಿರಾಸ್ಥಿ ಆಧಾರಿತ ಸಾಲಗಳು | 16,17,21,990.00 | |
| 7,19,260.00 | ಗ್ರಾಚ್ಯುಟಿ ನಿಧಿ | 8,52,600.00 | | | | | |
| 62,620.00 | ಕೊಡತಕ್ಕ ಲೆಕ್ಕಪರಿಶೋಧಕರ ಶುಲ್ಕ | 62,620.00 | | | **ಸ್ಥಿರಾಸ್ತಿಗಳು** | | 46,806.00 |
| 21,000.00 | ಬೋನಸ್ | 21,000.00 | | 13,806.00 | ಕಂಪ್ಯೂಟರ್ & ತಂತ್ರಾಂಶ | 8,284.00 | |
| 39,960.00 | ಅಮಾನತು ಖಾತೆ | 39,960.00 | | 39,631.00 | ಪೀಠೋಪಕರಣಗಳು | 35,668.00 | |
| | ಆಡಿಟರ್ ವೃತ್ತಿ ಶುಲ್ಕ | 17,700.00 | | 3,358.00 | ಕಛೇರಿ ಸಲಕರಣೆಗಳು | 2,854.00 | |
| 13,83,238.00 | ಲಾಭಾಂಶ | 13,73,355.00 | | | | | |
| 68,48,048.00 | ಶ್ರೀ ಗುರುರಾಘವೇಂದ್ರ ಸಹಕಾರ | 68,48,048.00 | | | | | |
| | ಬ್ಯಾಂಕ್‌ನಲ್ಲಿ ಠೇವಣಿ ಮೇಲಿನ | | | | | | |
| | ಸಂಚಿತ ಬಡ್ಡಿ | | | | **ಇತರೆ ಆಸ್ತಿಗಳು** | | 7,56,930.00 |
| 73,575.00 | ಶ್ರೀ ಗುರುರಾಘವೇಂದ್ರ ಸಹಕಾರ | 73,575.00 | | | | | |
| | ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ | | | | | | |
| | ಮೇಲಿನ ಸಂಚಿತ ಬಡ್ಡಿ | | | 1,20,000.00 | ಬಾಡಿಗೆ ಮುಂಗಡ | 1,20,000.00 | |
| 9,109.40 | ವೃತ್ತಿ ಮತ್ತು ತೆರಿಗೆ | | | 2,77,455.00 | ಮೂಲದಲ್ಲಿ ತೆರಿಗೆ ಕಡಿತ | 3,70,114.00 | |
| 17,700.00 | ವೃತ್ತಿ ಶುಲ್ಕ | 400.00 | | 2,62,744.00 | ಆದಾಯ ತೆರಿಗೆ 2017–2018 | 2,62,744.00 | |
| 88,218.00 | ಸಹಕಾರ ಅಕಾಡೆಮಿ | 99,994.00 | | | ಮಲ್ಲೇಶ್ವರಮ್ ಸಹಕಾರಿ ಬ್ಯಾಂಕ್ | 1,072.00 | |
| | | | | | ನಿಂದ ಬರಬೇಕಾದ ಬಡ್ಡಿ | | |
| | ಯಶಸ್ವಿನಿ ಇನ್ಸೆಸ್.ನ್ಸಿ | 100.00 | | 9,997.00 | ಜನತಾ ಸಹಕಾರಿ ಬ್ಯಾಂಕ್‌ನಿಂದ | – | |
| | | | | | ಬರಬೇಕಾದ ಬಡ್ಡಿ | | |
| | ಸರಕು ಮತ್ತು ಸೇವಾ ತೆರಿಗೆ | 11,191.40 | | 3,000.00 | ದೂರವಾಣಿ | 3,000.00 | |
| | ಭವಿಷ್ಯ ನಿಧಿ | 7,050.00 | | 4,157.00 | ಬರತಕ್ಕ ಆರ್ಬಿಟ್ರೇಶನ್ ಶುಲ್ಕ | | |
| | | | | | **ಲಾಭ ಹಾನಿ ಖಾತೆ** | – | |
| 23,55,171.47 | ಪ್ರಕಕ್ತ ಸಾಲಿನ ಲಾಭ | 25,18,817.62 | 25,18,817.62 | – | ಪ್ರಕಕ್ತ ಸಾಲಿನ ಹಾನಿ | – | |
| **23,00,45,201.58** | ಒಟ್ಟು ರೂ. | **24,29,98,260.20** | **24,29,98,260.20** | **23,00,45,201.58** | ಒಟ್ಟು ರೂ. | **24,29,98,260.20** | **24,29,98,260.20** |

**ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**

Sd/-
**(ಆನಂದ ಹಳಪೇಟ್)**
**ಮುಖ್ಯಕಾರ್ಯನಿರ್ವಾಹಕರು**

Sd/-
**(ಎಮ್.ಎನ್.ಶ್ರೀನಿವಾಸರಂಗಾಚಾರ್)**
**ನಿರ್ದೇಶಕರು**

Sd/-
**(ಬಿ.ಎನ್.ಬಾಲಕೃಷ್ಣ)**
**ಉಪಾಧ್ಯಕ್ಷರು**

Sd/-
**(ಹೆಚ್.ಆರ್.ಕಸ್ತೂರಿರಂಗನ್)**
**ಅಧ್ಯಕ್ಷರು**

ಕರ್ನಾಟಕ ಸೌಹಾರ್ದ ಸಹಕಾರಿ ಅದಿನಿಯಮ, 1997ರಕಲಂ 33(16) ರಂತೆ

ನಾನು **ಹರ್ಷ ಹೆಗಡೆ** ಈ ಮೂಲಕ ದೃಢೀಕರಿಸುವುದೇನೆಂದರೆ

1) ನನ್ನ ತಿಳುವಳಿಕೆ, ಅಭಿಪ್ರಾಯ ಹಾಗೂ ಲೆಕ್ಕಪರಿಶೋಧನಾ ಕಾಲಕ್ಕೆ ನನಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕಪತ್ರಗಳು, ಆರ್ಥಿಕ ತಃಖ್ತೆಗಳು, ಅನುಸೂಚಿಗಳು ಕರ್ನಾಟಕ ಸೌಹರ್ದ ಸಹಕಾರಿ ಅಧಿನಿಯಮ 1997 ರಲ್ಲಿ ಅಗತ್ಯಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತವೆ.

2) ದಿನಾಂಕ : 31–3–2025ರಂತ್ಯಕ್ಕೆ ಇದ್ದ ಅಡಾವೆ ಪತ್ರಿಕೆ ಹಾಗೂ ಸನ್ 2024–25ನೇ ಸಾಲಿನ ಲಾಭ ಹಾನಿ ಪತ್ರಿಕೆಯ ಸಂಘದ ನಿಜವಾದ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭ ಹಾನಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯ ಪಡುತ್ತೇನೆ.

3) ನನ್ನ ಜ್ಞಾನ ಹಾಗೂ ನಂಬಿಕೆಯ ಪ್ರಕಾರ ಲೆಕ್ಕಪರಿಶೋಧನೆಗೆ ಅವಶ್ಯವಾದ ಮಾಹಿತಿ ಹಾಗೂ ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇನೆ.

4) ಸಂಘದ ಲೆಕ್ಕಪರಿಶೋಧನಾ ಕಾಲಕ್ಕೆ ಕಂಡುಬಂದಂತೆ ಸಂಘದಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.

5) ವರದಿಗೆ ಲಗತ್ತಿಸಿದ ಅಡಾವೆ ಪತ್ರಿಕೆ ಹಾಗೂ ಇತರೆ ಆರ್ಥಿಕ ತಃಖ್ತೆಗಳು ಸಂಘದಲ್ಲಿ ನಿರ್ವಹಿಸಿದ ಲೆಕ್ಕಪತ್ರ ಪುಸ್ತಕಗಳಿಗೆ ತಾಳೆ ಇರುತ್ತದೆ.



**ಬೇಲೂರು& ಕೋ**
ಸನ್ನದು ಲೆಕ್ಕಪರಿಶೋಧಕರು–ಎಫ್.ಆರ್.ಎನ್ ನಂ:000416ಎಸ್
ಸಹಿ
ಹರ್ಷ ಹೆಗಡೆ
ಪಾಲುದಾರರು ಎಂ.ಸಂ.226965
UDIN:25226965BMMHUW1703

ದಿನಾಂಕ: 25.06.2025
ಸ್ಥಳ: ಬೆಂಗಳೂರು

# ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ, ಮಲ್ಲೇಶ್ವರಂ, ಬೆಂಗಳೂರು.

## ದಿನಾಂಕ 01–04–2024 ರಿಂದ 31–03–2025 ರವರೆಗಿನ ಲಾಭ ಹಾನಿ ಪತ್ರಿಕೆ

| ಹಾನಿ ವಿವರ | | | ಲಾಭದ ವಿವರ | | |
|---|---|---|---|---|---|
| ಹಿಂದಿನ ಸಾಲು | | ಪ್ರಸಕ್ತ ಸಾಲು | ಹಿಂದಿನ ಸಾಲು | | ಪ್ರಸಕ್ತ ಸಾಲು |
| – | **ಪಡೆದ ಸಾಲದ ಮೇಲಿನ ಬಡ್ಡಿ** | – | | **ಬಡ್ಡಿ & ರಿಯಾಯಿತಿ** | |
| 1,21,34,117.00 | ಪಾವತಿಸಿದ ನಿಶ್ಚಿತ ಠೇವಣಿಯ ಬಡ್ಡಿ | 1,29,69,502.00 | 1,58,76,612.80 | ಸಾಲ ಮತ್ತು ಮುಂಗಡ ಹಣದ ಬಡ್ಡಿ | 1,57,41,377.88 |
| 10,81,296.00 | ಸಿಬ್ಬಂದಿ ವೇತನ ಭವಿಷ್ಯ ನಿಧಿ ಇತ್ಯಾದಿ | 12,05,564.00 | 3,80,016.00 | ದಂಡದ ಬಡ್ಡಿ | 34,485.00 |
| | | | 28,811.00 | ಬಿ ಡಿ ಸಿ ಸಿ ಬ್ಯಾಂಕ್ ಅರ್.ಎಫ್.ಡಿ ಮೇಲೆ ಬಡ್ಡಿ | 28,733.00 |
| | **ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು** | | 154.00 | ಬಿ ಡಿ ಸಿ ಸಿ ಬ್ಯಾಂಕ್ ಉಳಿತಾಯ ಖಾತೆಯ ಮೇಲೆ ಬಡ್ಡಿ | 2,149.00 |
| 16,897.00 | ವಿದ್ಯುತ್ ಶುಲ್ಕ ಮತ್ತು ಇತರೆ ಸ್ಥಾಪನೆ | 9,726.00 | – | ಬಿ ಡಿ ಸಿ ಸಿ ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ | 5,76,765.00 |
| 31,005.00 | ಪ್ರಯಾಣ ವೆಚ್ಚ | 30,795.00 | 1,18,918.00 | ಕೆ ವಿ ಬಿ ಉಳಿತಾಯ ಖಾತೆಯ ಮೇಲೆ ಬಡ್ಡಿ | 93,613.00 |
| 7,244.00 | ದೂರವಾಣಿ, ದೂರವಾಣಿ ವೆಚ್ಚ | 7,304.00 | 5,283.00 | ಶ್ರೀಚರಣ್ ಸೌಹಾರ್ದ ಸಹಕಾರಿ ಬ್ಯಾಂಕ್ ಠೇವಣಿಯ ಮೇಲೆ ಬಡ್ಡಿ | 39,732.00 |
| 3,439.00 | ಮುದ್ರಣ & ಲೇಖನ ಸಾಮಗ್ರಿ | 10,510.00 | 1,37,453.00 | ಜನತಾ ಸಹಕಾರಿ ಬ್ಯಾಂಕ್ ಠೇವಣಿಯ ಮೇಲೆ ಬಡ್ಡಿ | 22,559.00 |
| 25,000.00 | ಕಾನೂನು ವೆಚ್ಚ | – | 1,22,893.00 | ಕರ್ನಾಟಕ ರಾಜ್ಯ ಕೋ–ಆಪ್ ಅಪೆಕ್ಸ್ ಬ್ಯಾಂಕ್ ಹೂಡಿಕೆಯ ಮೇಲೆ ಬಡ್ಡಿ | 9,33,825.00 |
| 8,212.00 | ವಿಮೆ | 8,223.00 | 4,00,000.00 | ಮಲ್ಲೇಶ್ವರಮ್ ಸಹಕಾರಿ ಬ್ಯಾಂಕ್ ಹೂಡಿಕೆಯ ಮೇಲೆ ಬಡ್ಡಿ | 3,43,450.00 |
| 75,000.00 | ಬಾಡಿಗೆ | – | 13,933.00 | ಕರ್ನಾಟಕ ರಾಜ್ಯ ಕೋ–ಆಪ್ ಅಪೆಕ್ಸ್ ಬ್ಯಾಂಕ್ ಉಳಿತಾಯ ಖಾತೆಯ ಮೇಲೆ ಬಡ್ಡಿ | 21,799.00 |
| 62,620.00 | ಲೆಕ್ಕಪರಿಶೋಧನಾ ವೆಚ್ಚ | 59,000.00 | 38,899.00 | ಸಾರಸ್ವತ ಸಹಕಾರಿ ಬ್ಯಾಂಕ ಠೇವಣಿಯ ಮೇಲೆ ಬಡ್ಡಿ | 2,50,834.00 |
| 61,114.41 | ವಾರ್ಷಿಕ ಸಾಮಾನ್ಯ ಸಭೆ ವೆಚ್ಚ | 72,837.00 | – | ಸಾರಸ್ವತ ಸಹಕಾರಿ ಬ್ಯಾಂಕ್ ಉಳಿತಾಯ ಖಾತೆಯ ಮೇಲೆ ಬಡ್ಡಿ | 1,05,454.00 |
| 35,400.00 | ವ್ವಾರ್ಷಿಕ ಸದಸ್ಯತ್ವದ ಶುಲ್ಕ | 35,400.00 | | | |
| 29,880.00 | ಆಂತರಿಕ ಲೆಕ್ಕಪರಿಶೋಧನೆ ಶುಲ್ಕ ಮತ್ತು ವೃತ್ತಿ ಶುಲ್ಕ | 29,990.00 | | **ಇತರೆ ಆದಾಯಾ** | |
| 1,818.00 | ಇತರೆ ವೆಚ್ಚ | 1,398.00 | 280.00 | ಪ್ರವೇಶ ಶುಲ್ಕ | 300.00 |

| ಹಾನಿ ವಿವರ | | | ಲಾಭದ ವಿವರ | | |
|---|---|---|---|---|---|
| ಹಿಂದಿನ ಸಾಲು | | ಪ್ರಸಕ್ತ ಸಾಲು | ಹಿಂದಿನ ಸಾಲು | | ಪ್ರಸಕ್ತ ಸಾಲು |
| 272.92 | ಬ್ಯಾಂಕ್ ವೆಚ್ಚ | 92.26 | 700.00 | ಸಾದಿಲ್ವಾರು ಶೇರು ಆದಾಯ | 750.00 |
| 17,700.00 | ಲೆಕ್ಕಪರಿಶೋಧಕರ ವೃತ್ತಿ ಶುಲ್ಕ | 61,360.00 | 170.00 | ಸಾಲ ಅರ್ಜಿ ಶುಲ್ಕ | 150.00 |
| 50,000.00 | ನಿಷ್ಕ್ರೀಯ ಆಸ್ತಿಗೆ ಅವಕಾಶ | 30,000.00 | 28,150.00 | ಸಾಲ ಪ್ರಕ್ರಿಯಾ ಶುಲ್ಕ | 21,400.00 |
| 6,000.00 | ಭವಿಷ್ಯ ನಿಧಿ ಆಡಳಿತ ವೆಚ್ಚ | 5,500.00 | 270.00 | ಶೇರು ಅರ್ಜಿ ಶುಲ್ಕ | 250.00 |
| 2,500.00 | ಸಹಕಾರಿ ವೃತ್ತಿ ತೆರಿಗೆ | 2,500.00 | 4,570.00 | ಶೇರು ಶುಲ್ಕ | 3,020.00 |
| 1,800.00 | ಭವಿಷ್ಯ ನಿಧಿ (ಎಡಿಎಲ್‌ಐ) ವೆಚ್ಚ | 1,650.00 | | | |
| 21,000.00 | ಬೋನಸ್ ಅವಕಾಶ | 21,000.00 | | | |
| 11,00,000.00 | ಹೂಡಿಕೆಗಳ ಮೇಲೆ ತುರ್ತು ಅಗತ್ಯತೆಗೆ ಅವಕಾಶ | 11,00,000.00 | | | |
| 20,169.00 | ರಿಪೇರಿ ಮತ್ತು ನಿರ್ವಹಣೆ | 29,488.00 | | | |
| – | **ನಿರ್ದೇಶ ಮಂಡಳಿಯ ವೆಚ್ಚ** | – | | | |
| – | ಸಭೆ ಮಂಡಳಿಯ ವೆಚ್ಚ | – | | | |
| | **ಅವಕಾಶಗಳು** | | | | |
| 9,457.00 | ಸವಕಳಿ | 9,989.00 | | | |
| | **ಲಾಭ ಹಾನಿ ಖಾತೆ** | | | | |
| 23,55,171.47 | ಪ್ರಕಕ್ತ ಸಾಲಿನ ಲಾಭ | **25,18,817.62** | | | |
| **1,71,57,112.80** | ಒಟ್ಟು ರೂ. | **1,82,20,645.88** | **1,71,57,112.80** | ಒಟ್ಟು ರೂ. | **1,82,20,645.88** |

**ಬೇಲೂರು & ಕೋ**
**ಸನ್ನದು ಲೆಕ್ಕಪರಿಶೋಧಕರು–ಎಫ್.ಆರ್.ಎನ್ ನಂ:000416ಎಸ್**

**ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**

**ಸಹಿ**
**ಹರ್ಷ ಹೆಗಡೆ**
**ಪಾಲುದಾರರು ಎಂ.ಸಂ.226965 UDIN:25226965BMMHUW1703**

**ದಿನಾಂಕ: 25.06.2025**
**ಸ್ಥಳ: ಬೆಂಗಳೂರು**

Sd/-
**ಆನಂದ ಹಳಪೇಟ್**
ಮು.ಕಾ.ನಿರ್ವಾಹಕ

Sd/-
**ಎಮ್.ಎನ್. ಶ್ರೀನಿವಾಸರಂಗಾಚಾರ್**
ನಿರ್ದೇಶಕರು

Sd/-
**(ಬಿ.ಎನ್.ಬಾಲಕೃಷ್ಣ)**
ಉಪಾಧ್ಯಕ್ಷರು

Sd/-
**ಹೆಚ್.ಆರ್. ಕಸ್ತೂರಿರಂಗನ್**
ಅಧ್ಯಕ್ಷರು

**ಬೇಲೂರು& ಕಂ.**
ಸನ್ನದು ಲೆಕ್ಕ ಪರಿಶೋಧಕರು
PAN: AABFB1477H

3Y, "ಲಕ್ಷ್ಮೀ ನಿವಾಸ", ಮೊದಲನೇ ಮಹಡಿ
ಆರನೇ ಮುಖ್ಯರಸ್ತೆ, ಏಳನೇ ಬ್ಲಾಕ್, ನಾಲ್ಕನೇ ಹಂತ,
ಬನಶಂಕರಿ ಮೂರನೇ ಹಂತ, ಬೆಂಗಳೂರು–56008
ದೂರವಾಣಿ: 9480518582
E-mail: partner@belurandco.com
GSTI No: 29AABFB1477H1ZH

**ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ, ಬೆಂಗಳೂರು**
**ಇದರ ಸನ್2024–2025ನೇ ಸಾಲಿನ ಲೆಕ್ಕಪರಿಶೋಧನಾ ವರದಿ**

**ವಿಶೇಷ ಸೂಚನೆ:** ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರತಿಯೊಂದು ಅಂಶದ ಬಗ್ಗೆ ನೀಡಿರುವ ಪ್ರಶ್ನಾವಳಿಯಂತೆ ಆ ವಿಷಯದ ಬಗ್ಗೆ ಕನಿಷ್ಠ ಮಾಹಿತಿ ನೀಡಬೇಕಿದ್ದು, ಇದಕ್ಕೆ ಮಾತ್ರ ಸೀಮಿತ ಇರದೆ, ಸಂಬಂಧಿಸಿದ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿದ್ದಲ್ಲಿ ಅದನ್ನು ಕಡ್ಡಾಯವಾಗಿ ವರದಿಯಲ್ಲಿ ಅಳವಡಿಸುವುದು. ಅದರಂತೆ ಪ್ರತಿ ಪ್ರಶ್ನೆಗೆ ಕೇವಲ **'ಹೌದು'** ಅಥವಾ **'ಇಲ್ಲ'** ಎಂದು ಮಾತ್ರ ಉತ್ತರಿಸದೆ ಕಂಡಿಕೆಗೆ ಅಗತ್ಯ ಇರುವ ಪೂರ್ಣ ಮಾಹಿತಿ ನೀಡುವುದು.

(ಹಣ ದುರುಪಯೋಗ ಹಾಗೂ ಗುರುತರವಾದ ನ್ಯೂನತೆಗಳ ಬಗ್ಗೆ 31 ನೇ ಕಂಡಿಕೆಗಳನ್ನು ಓದುವುದು)

## ಭಾಗ–1

## ಸಹಕಾರಿಯ ಪರಿಚಯಾತ್ಮಕ ವಿವರಗಳು

### 1) ಸಹಕಾರಿಯ ವಿವರಗಳು:

| | |
|---|---|
| 1) ಸಹಕಾರಿಯ ಪೂರ್ಣ ಹೆಸರು (ನೋಂದಣಿ ಪ್ರಮಾಣ ಪತ್ರದಲ್ಲಿ ಇದ್ದಂತೆ) | ಶ್ರೀನಿಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ. |
| 2) ನೋಂದಣಿ ಸಂಖ್ಯೆ ಹಾಗೂ ದಿನಾಂಕ | ಆರ್‌ಎಸ್ ಆರ್/ಸೌ.ಕಾ.86/ನೋ.ಸಂ.029.2001–2002 ದಿನಾಂಕ: 16.10.2001 |
| 3) ಸಂಪೂರ್ಣ ಅಂಚೆ ವಿಳಾಸ | ನಂ80/81, 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ ಬೆಂಗಳೂರು–560003 |
| 4) ದೂರವಾಣಿ/ಮೊಬೈಲ್ ಸಂಖ್ಯೆ | 9731802551 |
| 5) ಮಿಂಚಂಚೆ ವಿಳಾಸ (email id) | srinidhi.souharda@gmail.com |
| 6) ಕಾರ್ಯಕ್ಷೇತ್ರ (ಸಹಕಾರಿಯ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಉಪವಿಧಿಯ ಪ್ರಕರಣ 2ರ ಪ್ರಕಾರ ಸಹಕಾರಿ ಸಂಘದ ಕಾರ್ಯವ್ಯಾಪ್ತಿಯು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳು ಆಗಿರುತ್ತದೆ. |

### 2) ಸಹಕಾರಿಯ ಉದ್ದೇಶಗಳ ಬಗ್ಗೆ:

| | |
|---|---|
| 1) ಸಹಕಾರಿಯ ಉಪವಿಧಿಗಳಲ್ಲಿ ಉದ್ದೇಶಿಸಿದ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆಯೇ? | ಹೌದು.<br>1. ಸಹಕಾರಿಯ ಸದಸ್ಯರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆ ಪ್ರೋತ್ಸಾಹಿಸುವುದು.<br>2. ಸದಸ್ಯರ ವಿವಿಧ ರೀತಿಯ ಹೂಡಿಕೆಯ ಅಗತ್ಯತೆಗಳನ್ನು ಪೂರೈಸುವುದು.<br>3. ಸದಸ್ಯರ ವಿವಿಧ ರೀತಿಯ ಸಾಲ ಹಾಗೂ ಮುಂಗಡಗಳನ್ನು ನೀಡುವುದು.<br>4. ಸದಸ್ಯರಿಗೆ ವಿವಿಧ ಹಣಕಾಸು ಸೇವೆ ಮತ್ತು ಸೌಲಭ್ಯಗಳನ್ನು ನೀಡುವುದು.<br>5. ಪತ್ತಿನ ವ್ಯವಹಾರ ಮಾಡುವುದು. |

| | |
|---|---|
| 2) ಉಪವಿಧಿಗಳಲ್ಲಿ ಇಲ್ಲದ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆಯೇ? | ಯಾವುದೂ ಇರುವುದಿಲ್ಲ. |

**3) ಸಹಕಾರಿಯ ಪದಾಧಿಕಾರಿಗಳ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ:**
(ದಿನಾಂಕ 31–03–2025ರಲ್ಲಿದ್ದಂತೆ)

| | | |
|---|---|---|
| 1) | ಅಧ್ಯಕ್ಷರು | ಶ್ರೀ ಕಸ್ತೂರಿರಂಗನ್ ಹೆಚ್.ಆರ್ |
| 2) | ಉಪಾಧ್ಯಕ್ಷರು | ಶ್ರೀ ಬಿ. ಎನ್. ಬಾಲಕೃಷ್ಣ |
| 3) | ಮುಖ್ಯಕಾರ್ಯನಿರ್ವಾಹಣಾಧಿಕಾರಿ | ಶ್ರೀ ಆನಂದ ಹಳಪೇಟ್ |
| 4) | ವರದಿ ಸಾಲಿನಲ್ಲಿ ಜರುಗಿದ ಆಡಳಿತ ಮಂಡಳಿ ಸಭೆಗಳು ಹಾಗೂ ಅದರಲ್ಲಿ ತೆಗೆದುಕೊಂಡಿರುವ ತೀರ್ಮಾನಗಳಿಗೆ ಸಂಬಂಧಿಸಿದಂತೆ ವಿಮರ್ಶೆ | ಒಟ್ಟು 07 ಸಭೆಗಳು ನಡೆದಿದ್ದು ಸಭೆಗಳಲ್ಲಿ ಸಹಕಾರಿಗೆ ಸಂಬಂಧಪಟ್ಟ ಅವಶ್ಯ ವಿಷಯಗಳ ಕುರಿತು ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. |
| 5) | ವರದಿ ಸಾಲಿನಲ್ಲಿ ಜರುಗಿದ ಸಭೆಗಳ ನಡಾವಳಿ ಪುಸ್ತಕವನ್ನು ಸಂಪೂರ್ಣವಾಗಿ ಬರೆದಿರುವ ಬಗ್ಗೆ ಹಾಗೂ ಸಭೆಗಳಲ್ಲಿ ವಿಷಯ ಸೂಚಿಯಂತೆ ಚರ್ಚೆ ನಡೆಸಿ ಸೂಕ್ತ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ವಿಮರ್ಶಿಸುವುದು. | ವರದಿ ಸಾಲಿನಲ್ಲಿ ಜರುಗಿದ ಸಭೆಗಳ ನಡಾವಳಿ ಪುಸ್ತಕವನ್ನು ಸಂಪೂರ್ಣವಾಗಿ ಬರೆದು ಹಾಗೂ ಸಭೆಯಲ್ಲಿ ವಿಷಯ ಸೂಚಿಯಂತೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗಿದೆ. |

**4) ವಾರ್ಷಿಕ ಸಾಮಾನ್ಯ ಸಭೆ:**

| | | |
|---|---|---|
| 1) | ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ | 01.09.2024 |
| 2) | ಸಹಕಾರಿಯ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ | 141 |
| 3) | ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ | 225 |
| 4) | ಸಭೆಯ ವಿಷಯ ಪಟ್ಟಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಯಮ, 1997ರಕಲಂ 23(3) ರಲ್ಲಿ ನಿಗದಿಪಡಿಸಿದಂತೆ ವಾರ್ಷಿಕ ಮಹಾಸಭೆಯಲ್ಲಿ ಅವಶ್ಯವಿರುವ ವಿಷಯಗಳನ್ನು ಒಳಗೊಂಡಿರುವುದೆ? ವಿವರಿಸುವುದು. | ಸಭೆಯ ವಿಷಯ ಪಟ್ಟಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಕಲಂ23(3)ರಲ್ಲಿ ನಿಗದಿಪಡಿಸಿದಂತೆ ಅವಶ್ಯವಿರುವ ವಿಷಯಗಳನ್ನು ಒಳಗೊಂಡಿರುತ್ತದೆ |
| 5) | ಈ ಮೇಲಿನ ನಿಯಮಗಳಲ್ಲಿ ನಿಗದಿಪಡಿಸಿದ ಎಲ್ಲಾ ವಿಷಯಗಳ ಕುರಿತು ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ನಡಾವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆಯೇ? | ನಿಗದಿ ಪಡಿಸಿದ ಅವಶ್ಯವಿರುವ ಎಲ್ಲಾ ವಿಷಯಗಳ ಕುರಿತು ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ನಡಾವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆ. |
| 6) | ಅವಶ್ಯವಿರುವ ವಿಷಯಗಳ ಪೈಕಿ ಕೈಬಿಟ್ಟು ಹೋದ ವಿಷಯಗಳ ಕುರಿತು ವಿಮರ್ಶಿಸುವುದು. | ಯಾವುದೇ ವಿಷಯ ಕೈ ಬಿಟ್ಟಿರುವುದಿಲ್ಲ. |

5) **ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ:**

| | | |
|---|---|---|
| 1. | ಲೆಕ್ಕಪರಿಶೋಧಕರ ಹೆಸರು | ಬೇಲೂರು & ಕೋ., |
| 2. | ಹುದ್ದೆ ಹಾಗೂ ವಿಳಾಸ | **3Y, "ಲಕ್ಷ್ಮೀ ನವಾಸ", ಮೊದಲನೇ ಮಹಡಿ ಆರನೇ ಮುಖ್ಯರಸ್ತೆ, ಏಳನೇ ಬ್ಲಾಕ್, ನಾಲ್ಕನೇ ಹಂತ, ಬನಶಂಕರಿ ಮೂರನೇ ಹಂತ, ಬೆಂಗಳೂರು–560085 ಮೊಬೈಲ್ ಸಂಖ್ಯೆ: 9480518582** |
| 3. | ದೂರವಾಣಿ ಸಂಖ್ಯೆ. ಮಿಂಚಂಚೆ ವಿಳಾಸ (email id) | E-mail: partner@belurandco.com |
| 4. | ಎಂಪಾನಲ್‌ಮೆಂಟ್ ನಂಬರ್ | F-01/02/2021-16:12:02 |
| 5. | ವಾರ್ಷಿಕ ಮಹಾಸಭೆಯ ನೇಮಕಾತಿ ದಿನಾಂಕ ಹಾಗೂ ಠರಾವು ಸಂಖ್ಯೆ/ ನಿರ್ದೇಶಕರ ಆದೇಶ ಸಂಖ್ಯೆ ಮತ್ತು ದಿನಾಂಕ | ದಿನಾಂಕ: 01.09.2024<br>ಠರಾವು ಸಂಖ್ಯೆ: 08 |
| 6. | ಲೆಕ್ಕಪರಿಶೋಧನೆ ಆರಂಭದ ದಿನಾಂಕ | 06.04.2025 |
| 7. | ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ | 25.06.2025 |
| 8. | ಲೆಕ್ಕಪರಿಶೋಧನೆಗೆ ತೆಗೆದುಕೊಂಡ (ಮಾನವ) ದಿನಗಳು | 10ಮಾನವ ದಿನಗಳು |
| 9. | ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿದ ದಿನಾಂಕ | ದಿನಾಂಕ:07.09.2024REF:SSPSN/972/2024–2025 |

6) **ಆಂತರಿಕ ಲೆಕ್ಕಪರಿಶೋಧನೆ ಬಗ್ಗೆ ವಿಮರ್ಶೆ:**

| | | |
|---|---|---|
| 1. | ಸಹಕಾರಿಯ ವ್ಯವಹಾರಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೇ? | ಹೌದು, ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆ. |
| 2. | ಆಂತರಿಕ ಲೆಕ್ಕಪರಿಶೋಧನೆ ಕೈಗೊಂಡಿರುವ ಲೆಕ್ಕಪರಿಶೋಧಕರ ಹೆಸರು, ಹುದ್ದೆ ಹಾಗೂ ವಿಳಾಸ. | ಶ್ರೀ ಜನಾರ್ದನ ಅಯ್ಯಂಗಾರ್.ಎಂ. ನಿವೃತ್ತ ಕೆನರಾ ಬ್ಯಾಂಕ್ ಉದ್ಯೋಗಿ. ಬಿ.ಎಸ್ಸಿ. |
| 3. | ಆಂತರಿಕ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ತ್ರೈಮಾಸಿಕಕ್ಕೆ ನೀಡಲಾಗಿದೆಯೇ? | ಆಗಿಂದಾಗ್ಗೆ ನೀಡಿ ಸರಿಪಡಿಸುತ್ತಿದ್ದಾರೆ. |
| 4. | ಆಂತರಿಕ ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು. | ಗಂಭೀರವಾದ ನ್ಯೂನತೆಗಳು ಇರುವುದಿಲ್ಲ. |
| 5. | ಅವುಗಳನ್ನು ಸರಿಪಡಿಸಲು ಸಹಕಾರಿಯು ತೆಗೆದುಕೊಂಡಿರುವ ಕ್ರಮಗಳ ವಿವರ. | ಸರಿಪಡಿಸಲಾಗಿದೆ. |

| | | |
|---|---|---|
| 6. | ಅಂತಹ ಗಂಭೀರ ಸ್ವರೂಪದ ನ್ಯೂನತೆಗಳು ಮುಂದುವರೆದಿದ್ದಲ್ಲಿ ಅವುಗಳನ್ನು ಶಾಸನಬದ್ಧ ಅಂತಿಮ ವರದಿಯಲ್ಲಿ ಅಳವಡಿಸಲಾಗಿದೆಯೇ? | ಗಂಭೀರ ಸ್ವರೂಪದ ನ್ಯೂನತೆಗಳು ಕಂಡುಬಂದಿರುವುದಿಲ್ಲ. |

**ಟಿಪ್ಪಣಿ:** ಆಂತರಿಕ ಲೆಕ್ಕಪರಿಶೋಧನ ಕೈಗೊಂಡಿದ್ದರೂ ಸಹ ಆಂತರಿಕ ಲೆಕ್ಕಪರಿಶೋಧನಾ ವರದಿ ಲಭ್ಯವಿರುವುದಿಲ್ಲ. ಆಂತರಿಕ ಲೆಕ್ಕಪರಿಶೋಧನ ಸಮಯದಲ್ಲಿ ಯಾವುದೇ ಲೋಪದೋಷ ಕಂಡುಬಂದಿದ್ದರೂ ಕೂಡಲೇ ಸರಿಪಡಿಸಿಕೊಳ್ಳಲಾಗುತ್ತದೆ. ಆಂತರಿಕ ಲೆಕ್ಕಪರಿಶೋಧನ ವರದಿಯನ್ನು ನೀಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಆಂತರಿಕ ಲೆಕ್ಕಪರಿಶೋಧಕರು ನ್ಯೂನತೆಗಳ ವರದಿ ನೀಡಿರುತ್ತಾರೆ. ಅವುಗಳನ್ನು ತ್ವರಿತವಾಗಿ ಸರಿಪಡಿಸಲಾಗಿದೆ.**

**7) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ:**

ಸಹಕಾರಿಯಲ್ಲಿ ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 33(10)ರಂತೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? ಸಲ್ಲಿಸಲಾಗಿದೆ.

2) ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ: 973/2024–25 ದಿನಾಂಕ: 20–09–2024

3) ಗಂಭೀರ ಸ್ವರೂಪದ ನ್ಯೂನತೆಗಳು/ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.

| ಕ್ರ.ಸ. | ಪುಟ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|---|
| **ಗಂಭೀರ ಸ್ವರೂಪದ ನ್ಯೂನತೆ/ಆಕ್ಷೇಪಣೆಗಳು ಯಾವುದೂ ಇರುವುದಿಲ್ಲ.** | | | | | |

**8) ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಕಾನೂನುಗಳ ಉಲ್ಲಂಘನೆ ಕುರಿತು:**

(ವರದಿ ಸಾಲಿನಲ್ಲಿ ಸಹಕಾರಿ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಉಪವಿಧಿಗಳ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)

| | | |
|---|---|---|
| 1 | ಸೌಹಾರ್ದ ಕಾಯ್ದೆ, ನಿಯಮಗಳ ಉಲ್ಲಂಘನೆ ಬಗ್ಗೆ ಟಿಪ್ಪಣಿ | ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಪಾಲನೆ ಮಾಡಲಾಗಿದೆ. |
| 2 | ಉಪವಿಧಿಗಳ ಉಲ್ಲಂಘನೆ ಬಗ್ಗೆ ವರದಿ | 1. ಕೆಲವು ಸದಸ್ಯರು ಕನಿಷ್ಠ ವ್ಯವಹಾರವನ್ನು ಮಾಡಿಲ್ಲದಿರುವುದು ಉಪವಿಧಿ ಪ್ರಕರಣ 32.2ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ.<br>2. ಕೆಲವು ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡದಿರುವುದು ಉಪವಿಧಿ ಪ್ರಕರಣ 26ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ.<br>**ಸಮಜಾಯಿಷಿ: ಸದಸ್ಯರಿಗೆ ಈ ಬಗ್ಗೆ ತಿಳುವಳಿಕೆ ನೀಡಲಾಗಿದೆ.** |
| 3 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೇ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ? | ಸಹಕಾರಿಯು ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಅನುಸರಿಸಲಾಗಿದೆ. |

# ಭಾಗ – 2

**ಸಹಕಾರಿಯ ವ್ಯಾವಹಾರಿಕ ವಿವರಗಳು**

**9) ದಿನಾಂಕ 31–03–2025ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಸದಸ್ಯತ್ವ | ಸರಕಾರಿ ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ಸಹ ಸದಸ್ಯತ್ವ | ನಾಮಮಾತ್ರ ಸದಸ್ಯತ್ವ |
|---|---|---|---|---|---|
| | | ಪ್ರಸಕ್ತ ಸಾಲು | ಹಿಂದಿನ ಸಾಲು | | |
| 1. ವರ್ಷಾರಂಭದಲ್ಲಿ ಇದ್ದ ಸದಸ್ಯರು | – | 1404 | 1386 | – | – |
| 2. ಹೊಸದಾಗಿ ಸದಸ್ಯತ್ವ ಪಡೆದವರು | – | 28 | 28 | 1 | – |
| 3. ಸದಸ್ಯತ್ವದಿಂದ ಕಡಿಮೆ ಆದವರು | – | 15 | 10 | 0 | – |
| 4. ವರ್ಷಾಂತ್ಯಕ್ಕೆ ಇರುವ ಸದಸ್ಯರು | – | 1417 | 1404 | 1 | – |

| | |
|---|---|
| 1. ಸದಸ್ಯರಿಂದ ವಸೂಲಿಸಿದ ಷೇರಿನ ಮೊತ್ತವು ಸಹಕಾರಿಯ ಉಪ ನಿಯಮ 24 ರನ್ವಯ ಷೇರಿನ ಮುಖ ಬೆಲೆಗೆ ಅನುಗುಣವಾಗಿ ಇದೆಯೇ? | ಸಹಕಾರಿಯಲ್ಲಿ ವರ್ಷದ ಆರಂಭದಲ್ಲಿ ರೂ.60,74,800.00 ಒಟ್ಟು ಷೇರು ಬಂಡವಾಳವಿದ್ದು ಪ್ರಸಕ್ತ ಸಾಲಿನಲ್ಲಿ ರೂ. 1,51,000.00 ಷೇರು ಬಂಡವಾಳ ಸಂಗ್ರಹಿಸಿದ್ದು ಹಾಗೂ ರೂ. 47,900.00 ಷೇರು ಬಂಡವಾಳವನ್ನು ಮರಳಿ ಪಡೆದಿರುತ್ತಾರೆ. ವರ್ಷದ ಅಂತ್ಯಕ್ಕೆ ರೂ.61,77,900.00 ಒಟ್ಟು ಷೇರು ಬಂಡವಾಳವಿರುತ್ತದೆ. ಕಳೆದ ಸಾಲಿಗೆ ಹೋಲಿಸಿದಾಗ ಸದಸ್ಯರ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ. 1.70 ರಷ್ಟು ಪ್ರಗತಿಯಾಗಿರುತ್ತದೆ. |

**10) ಮೀಸಲು ನಿಧಿ ಮತ್ತು ಇತರೆ ನಿಧಿಗಳು:**

| | | |
|---|---|---|
| 1 | ಸಹಕಾರಿಯಲ್ಲಿರುವ ಮೀಸಲು ನಿಧಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 7(1)ರನ್ವಯ ಪ್ರತ್ಯೇಕವಾಗಿ ಗುಂತಾಯಿಸಲಾಗಿದೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಹಕಾರಿಗೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ. | ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 18 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆ ಹಾಗೂ ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಹಕಾರಿಗೆ ಜಮಾ ಮಾಡಿಕೊಳ್ಳಲಾಗಿದೆ. |
| 2 | ನಿಧಿಗಳ ನಿಯೋಜನೆ ಮಾಡುವಾಗ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಕಲಂ 18ರ ಅಂಶಗಳನ್ನು ಪಾಲಿಸಲಾಗಿದೆಯೆ? | ನಿಧಿಗಳ ನಿಯೋಜನೆ ಮಾಡುವಾಗ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 18ರ ಅಂಶಗಳನ್ನು ಪಾಲಿಸಲಾಗಿದೆ. |
| 3 | ಉಪವಿಧಿಯಲ್ಲಿ ಪ್ರಾವಧಾನವಿಲ್ಲದೆ ಸೃಜಿಸಿದ ನಿಧಿಗಳ ವಿವರ | ಯಾವುದೂ ಕಂಡುಬಂದಿರುವುದಿಲ್ಲ |

**11. ಹೂಡಿಕೆಗಳು :**

ದಿನಾಂಕ 31–03–2025ಕ್ಕೆ ಸಂಘವು ರೂ.6,29,70,846.00 ಹೂಡಿಕೆಗಳು ಹೊಂದಿರುತ್ತದೆ.

| | |
|---|---|
| 1. ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ? | ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆ. |
| 2. ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ? | ಸಹಕಾರಿಯು ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆ. |
| 3. ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೇ? | 1. ವರದಿ ಸಾಲಿನ ಅಂತ್ಯಕ್ಕೆ ಸಹಕಾರಿಯು ಮಾಡಿದ ಹೂಡಿಕೆಗಳ ಒಳಗೊಂಡ ಕೆಲವು ಬ್ಯಾಂಕ್‌ಗಳಲ್ಲಿ ಇಟ್ಟ ಹಣದ ಮೊತ್ತ ಒಟ್ಟು ಹೂಡಿಕೆಯ ಶೇಕಡ 20 ಈ ಕೆಳಗೊಂಡ ಬ್ಯಾಂಕುಗಳಲ್ಲಿ ಮೀರಿರುತ್ತದೆ. ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್– 50.90% ಸಹಕಾರಿಯ ಹಿತದದೃಷ್ಟಿಯಿಂದ ಯಾವುದೇ ಒಂದು ಬ್ಯಾಂಕಿನಲ್ಲಿ ಮಾಡುವ ಹೂಡಿಕೆ ಶೇಕಡ 20 ಮೀರದಂತೆ ಸೂಚಿಸಲಾಗಿದೆ.<br>2. ಪರಂತು ಸಹಕಾರಿಯು ಸಂಯುಕ್ತ ಸಹಕಾರಿಯ ಮಾರ್ಗದರ್ಶನದಂತೆ ಠೇವಣಿಯ ಶೇ. 20 ಮತ್ತು ಮೀಸಲು ನಿಧಿಯನ್ನು ಹೊರಗಡೆ ಹೂಡಿಕೆ ಮಾಡಬೇಕಾಗಿದ್ದು, ಸಹಕಾರಿಯು ಮಾಡಿದ ಹೂಡಿಕೆ ಮಾರ್ಗದರ್ಶನದಂತೆ ಇರುತ್ತದೆ. ಪರಂತು ರಾಘವೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ಮಾಡಿರುವ ಹೂಡಿಕೆ ನಿಷ್ಕ್ರಿಯಗೊಂಡಿರುತ್ತದೆ.<br>**ಸಮಜಾಯಿಷಿ: ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕಿನಲ್ಲಿ ಮೊತ್ತ ಹಾಗೆಯೇ ಮುಂದುವರೆದಿದೆ.** |
| 4. ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಹಕಾರಿಗೆ ಜಮಾ ಆಗಿದೆಯೇ? | ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಹಕಾರಿಗೆ ಜಮಾ ಆಗಿದೆ. |
| 5. ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ | ದಿನಾಂಕ 31.03.2024ಕ್ಕೆ ಹೂಡಿಕೆ ರೂ.5,24,38,290.00 ಗಳಿದ್ದು.31.03.2025ರ ಅಂತ್ಯಕ್ಕೆ ರೂ.6,29,70,846.00 ಗಳಾಗಿದ್ದು ವರದಿ ಸಾಲಿನಲ್ಲಿ ರೂ.1,05,32,556.00ರಷ್ಟು ಹೂಡಿಕೆ ಹೆಚ್ಚಾಗಿರುತ್ತದೆ. ಅಂದರೆ ಪ್ರಸಕ್ತ ಸಾಲಿನಲ್ಲಿ ಹೂಡಿಕೆಗಳು ಶೇಕಡ 20.09 ರಷ್ಟು ಹೆಚ್ಚಾಗಿರುತ್ತದೆ. |
| 6. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಕಲಂ 18 ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ (ಶೇರು ಮತ್ತು ಭದ್ರತಾ ಪತ್ರಗಳಲ್ಲಿ ಹೊರತುಪಡಿಸಿ) ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆಂಯೆ? ಹೊಂದಿದಲ್ಲಿ ಆಕ್ಷೇಪಿಸಿ, ಮುಕ್ತಾಯಗೊಳಿಸಲು ಸೂಚಿಸುವುದು. | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಕಲಂ 18 ರ ವ್ಯತಿರಿಕ್ತವಾದ ವಿನಿಯೋಗ<br>ಸಂಸ್ಥೆಯ ಹೆಸರು \| ಮೊತ್ತ ರೂ.<br>ಅನ್ವಯಿಸುವುದಿಲ್ಲ |

| | | |
|---|---|---|
| 7. | ಸಹಕಾರಿಯು ವಿನಿಯೋಗಿಸಿರುವ ಸಂಸ್ಥೆ/ಬ್ಯಾಂಕುಗಳು ನಿಷ್ಕ್ರಿಯ ಅಥವಾ ಅವಸಾನಗೊಂಡಿದ್ದಲ್ಲಿ ಹೂಡಿಕೆಗಳನ್ನು ಹಿಂಪಡೆಯಲು ಸೂಚಿಸುವುದು. | ಯಾವುದೂ ಕಂಡು ಬಂದಿರುವುದಿಲ್ಲ. |
| 8. | ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ | ರಾಘವೇಂದ್ರ ಸಹಕಾರಿ ಬ್ಯಾಂಕ್ |
| 9. | ಕೋರಿಕೆಯ ಮೇರೆಗೆ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಬಗ್ಗೆ ವರ್ಷಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಅನ್ವಯಿಸುವುದಿಲ್ಲ. |
| 10. | ಸಹಕಾರಿಯು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯ ಇದೆಯೇ? ಲೆಕ್ಕಪರಿಶೋಧನಾ ಕಾಲಕ್ಕೆ ಪರಿಶೀಲಿಸಿ ಪ್ರತಿಯೊಂದು ವಿನಿಯೋಗಗಳ ವರ್ಷಾಂತ್ಯದ ದೃಢೀಕರಣವನ್ನು ವರದಿಗೆ ಲಗತ್ತಿಸುವುದು. | ಲಭ್ಯವಿರುತ್ತದೆ. ಲೆಕ್ಕಪರಿಶೋಧನಾ ಕಾಲಕ್ಕೆ ಪರಿಶೀಲಿಸಿ ಪ್ರತಿಯೊಂದು ವಿನಿಯೋಗಗಳ ವರ್ಷಾಂತ್ಯದ ದೃಢೀಕರಣವನ್ನು ವರದಿಗೆ ಲಗತ್ತಿಸಲಾಗಿದೆ. |

**12) ಹೊರಗಿನಿಂದ ಪಡೆದ ಸಾಲಗಳು, ಮುಂಗಡಗಳು ಹಾಗೂ ಸರಕಾರದ ಸಾಲಗಳು:**

ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ಸಾಲವನ್ನು ಪಡೆದಿರುವುದಿಲ್ಲ.

| ಸಹಕಾರಿಯು ಹೊರಗಿನಿಂದ ಪಡೆದ ಸಾಲಗಳು/ಮುಂಗಡಗಳು ಉಪನಿಯಮದ ಮಿತಿಯಲ್ಲಿ ಇರುವುದರ ಬಗ್ಗೆ ಅಥವಾ ಮಿತಿಮೀರಿ ಇರುವ ಬಗ್ಗೆ ಅಂಕಿ–ಅಂಶಗಳಂತೆ ವಿಮರ್ಶಿಸುವುದು. | | |
|---|---|---|
| ಉಪ ನಿಯಮ ಸಂಖ್ಯೆ | ಸಾಲ ಪಡೆಯಬಹುದಾದ ಮಿತಿ ರೂ. | ಪಡೆಯಲಾದ ಮೊತ್ತ ವಾಸ್ತವಿಕ ಮೊತ್ತ ರೂ. |

**13) ಠೇವಣಿಗಳು:**

| | |
|---|---|
| 1. ಸಹಕಾರಿಯು ಠೇವಣಿ ಸಂಗ್ರಹಣೆ ಮಾಡಲು ಉಪವಿಧಿಗಳಲ್ಲಿ ಇರುವ ಅವಕಾಶಗಳ ಬಗ್ಗೆ ಹಾಗೂ ಸಹಕಾರಿಯು ಸಂಗ್ರಹಿಸಿರುವ ಠೇವಣಿ ಸದರಿ ಮಿತಿಯೊಳಗೆ ಇರುವ ಬಗ್ಗೆ ವರದಿಯಲ್ಲಿ ವಿವರಿಸಲಾಗಿದೆಯೇ? ಎಲ್ಲಾ ಠೇವಣಿದಾರರು ಸಹಕಾರಿಯ ಸದಸ್ಯತ್ವ ಪಡೆದಿರುವರೇ? ಎಲ್ಲಾ ಠೇವಣಿದಾರರಿಂದ ಕೆ.ವೈ.ಸಿ. ವಿವರಗಳನ್ನು ಪಡೆಯಲಾಗಿದೆಯೇ? | ಸಹಕಾರಿಯು ಠೇವಣಿ ಸಂಗ್ರಹಣೆಗೆ ಉಪನಿಯಮವನ್ನು ರಚಿಸಿಕೊಂಡಿದ್ದು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಅನುಸಾರ ಠೇವಣಿಗಳನ್ನು ಸಂಗ್ರಹಿಸಿರುತ್ತದೆ. |

| ಕ್ರ.ಸಂ | ಠೇವಣಿಗಳ ವಿವರ | ವರ್ಷಾಂತ್ಯದ ಬಾಕಿ ಮೊತ್ತ | ಕುಳುವಾರಿನಂತೆ ಬಾಕಿ | ವ್ಯತ್ಯಾಸದ ಮೊತ್ತ |
|---|---|---|---|---|
| 1 | ನಿಶ್ಚಿತ ಠೇವಣಿ | 8,61,88,643.00 | 8,61,88,643.00 | 0.00 |
| 2 | ಉಳಿತಾಯ ಠೇವಣಿ | 21,55,173.00 | 21,55,173.00 | 0.00 |
| 3 | ಸಂಚಿತ ಸ್ಥಿರ ಠೇವಣಿ | 8,99,93,690.00 | 8,99,93,690.00 | 0.00 |
| | **ಒಟ್ಟು ರೂ.** | **17,83,37,506.00** | **17,83,37,506.00** | **0.00** |

| | |
|---|---|
| 1 ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಕಡ್ಡಾಯವಾಗಿ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಶಿಸಿ | ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ಬಡ್ಡಿಯನ್ನು ಕಾಲ ಕಾಲಕ್ಕೆ ವಿತರಿಸಲಾಗಿರುತ್ತದೆ. ಹಾಗೂ ವರ್ಷಾಂತ್ಯಕ್ಕೆ ಕೊಡಬೇಕಾದ ಬಡ್ಡಿಗಾಗಿ ರೂ.0.00 ಕಾಯ್ದಿರಿಸಲಾಗಿದೆ. |

**14) ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿಮೆಯ ಬಗ್ಗೆ ವಿಮರ್ಶೆ :**

1.ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಕಲಂ 22 ಉಲ್ಲಂಘಿಸಿ ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆಯೇ? ಕಲಂ 61 ನಿಯಮ 26ರನ್ವಯ ವರ್ಷಾಂತ್ಯದ ಠೇವು ಮತ್ತು ಬಡ್ಡಿ ಖಾತೆ ಬಾಕಿ ರಿಜಿಸ್ಟರ್ ಅನ್ನು ಪರಿಶೀಲಿಸಿ, ಅದರ ಸಂಕ್ಷಿಪ್ತವನ್ನು ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು.

| ಕ್ರ.ಸಂ | ಠೇವಣಿ | ಸಂಖ್ಯೆ | ಮೊತ್ತ |
|---|---|---|---|
| 1 | ಸದಸ್ಯರಿಂದ | 1418 | **17,83,37,506.00** |
| 2 | ಸದಸ್ಯರಲ್ಲದವರಿಂದ | 0 | 0 |
| | **ಒಟ್ಟು ರೂ.** | **1418** | **17,83,37,506.00** |

| | |
|---|---|
| 2. ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ನಿರ್ಧರಿಸಿರುವ ಆಡಳಿತ ಮಂಡಳಿ ಸಭೆ ದಿನಾಂಕ ಹಾಗೂ ಠರಾವು ಕ್ರಮಾಂಕ ನಮೂದಿಸಿ ವಿಮರ್ಶಿಸುವುದು. | ವಿಮರ್ಶೆ: ಆಡಳಿತ ಮಂಡಳಿ ಸಭೆಯ ದಿನಾಂಕ: 07.11.2021 ಠರಾವು ಸಂಖ್ಯೆ: 03 |

| ವಿವರ | ಪ್ರಸಕ್ತ ಸಾಲಿನ | | ಹಿಂದಿನ ಸಾಲಿನ | |
|---|---|---|---|---|
| | ಠೇವು | ಬಡ್ಡಿ | ಠೇವು | ಬಡ್ಡಿ |
| ಖಾತೆಗಳ ಸಂಖ್ಯೆ | 1418 | | 1404 | |
| ಅಢಾವೆ ಮೊತ್ತ | 17,83,37,506.00 | 1,29,69,502.00 | 16,84,25,640.00 | 1,21,34,117.00 |
| ಕುಳುವಾರು ಮೊತ್ತ | 17,83,37,506.00 | 1,29,69,502.00 | 16,84,25,640.00 | 1,21,34,117.00 |
| ಅಂತರ ರೂ. | 0 | 0 | 0 | 0 |
| ವರ್ಷಾಂತ್ಯದ ಬಾಕಿ ಯಾದಿಯ ಒಂದು ಪ್ರತಿಯನ್ನು ಮುದ್ರಿತಗೊಳಿಸಿ ಪರಿಶೀಲಿಸಿ ಪುಟವಾರು ಸಂಕ್ಷಿಪ್ತವನ್ನು ದೃಢೀಕರಿಸಿ ವರದಿಗೆ ಲಗತ್ತಿಸುವುದು. | | | | |

- ಪ್ರಸಕ್ತ ಸಾಲಿನ ಠೇವುಗಳ/ಬಡ್ಡಿಗಳ ಕಳೆದ 02 ವರ್ಷಗಳ ಅಂಕಿಗಳ ತುಲನಾತ್ಮಕ ವಿವರ ಹಾಗೂ ಠೇವಣಿಗೆ ಹೋಲಿಸಲಾಗಿ ಪಾವತಿಸಿರುವ ಬಡ್ಡಿಯ ಪ್ರತಿಶತ ಪ್ರಮಾಣದ ವಿವರ:

| ಕ್ರ ಸಂ | ವಿವರ | 2024–2025 ಕ್ಕೆ | 2023–2024 ಕ್ಕೆ |
